Sri C. J. MUCKANNAPPA.—Yesterday the Government made a motion that the time be extended by five hours. So only 1½ hours is left over. Is it How possible for dispoing of the Bill within that time? Unless a motion is made for further extension and the motion accepted by the House how is it possible to know whether the discussion goes tomorrow or not.

Sri KADIDAL MANJAPPA.—The extended time has not yet expired. we are still within the time.

Mr. DEPUTY SPEAKER.—We shall adhere to the allotted time.

Sri G. VENKATAI GOWDA.—There is a necessity on the part of the Government to extend the time further.

Mr. DEPUTY SPEAKER.—we shall see it. There is still time. Discussion will go on now.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಅಧ್ಯಕ್ಷರೇ, ಇಪ್ಪತ್ತೊನ್ಬತ್ತು ಮುಂದೆ ಇರತಕ್ಕ ಜಾಯಿಂಟ್ ಸೆಲೆಕ್ಟ್ ಕಮಿಟಿಯು ವರದಿಯನ್ನು ಪರಿಶೀಲಿಸುತ್ತ. ಅದಕ್ಕೆ ಸಂಬಂಧಪಟ್ಟಂತೆ ಕೆಲವು ಸಲಹೆಗಳನ್ನು ಮಾತ್ರ ಹೇಳಬೇಕೆಂದು ಅಪೇಕ್ಷೆ ಪಟ್ಟಿದೆ ನೆ. ತತ್ವ ನಾವೆಲ್ಲರೂ ಪಂಚ ಪಾರಂಪರ್ಯವಾಗಿ ಬಂದಿರುವ ಈ ಗ್ರಾಮಾಧಿಕಾರಿಗಳ ಹುದ್ದೆಯನ್ನು ರದ್ದುಪಡಿಸಬೇಕೆಂದು ಒಪ್ಪಿ ಕೊಂಡಿದ್ದೇವೆ. ಈ ವಿಚಾರವನ್ನು ಕೂಲಂಕಷವಾಗಿ ಚರ್ಚೆಮಾಡಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳಿಸಿದ ನಂತರ ಆ ಕಮಿಟಿಯ ರಿಪೋರ್ಟ್ ಈಗಿನ ಮುಂದೆ ಇರತಕ್ಕ ರಿಪೋರ್ಟನ್ನು ಚರ್ಚೆ ಮಾಡುವ ಕಾಲಕ್ಕೆ ಬರಗಿಂತ ಹೆಚ್ಚಾಗಿ ಕೆಲವು ಬದಲಾವಣೆಗಳು ಇದರಲ್ಲಿ ಆಗಿರುವುದರ ಕಾರಣ ಅನೇಕ ಜನರಿಗೆ ಇದು ಬಹಳ ಅನುಮಾನವನ್ನುಂಟುಮಾಡಿದೆ. ನಾವು ಗ್ರಾಮಾಧಿಕಾರಿಗಳ

(ಶ್ರೀಮತಿ ಜನವರಾಜೇಶ್ವರಿ)

ಹುದ್ದೆಗಳನ್ನು ರದ್ದುಮಾಡುವುದಕ್ಕೆ ಮೊದಲೇ ಪಂಚಪಾರಂಪರ್ಯವಾಗಿದ್ದ ಜಹಗೀರ್‌ದಾರರನ್ನು ತೆಗೆದುಹಾಕಿದ್ದೇವೆ ರಾಜರುಹಾರಾಳರನ್ನು ತೆಗೆದುಹಾಕಿದ್ದೇವೆ, ಈಗ ಅದೇ ಪ್ರಕಾರವಾಗಿ ಗ್ರಾಮಾಧಿಕಾರಿಗಳನ್ನು ಕೂಡ ರದ್ದುಮಾಡುತ್ತಿದ್ದೇವೆ. ಜಹಗೀರ್‌ದಾರರು ಮುಂತಾದವರಿಗೆ ಕೊಟ್ಟ ಸೌಕರ್ಯಗಳನ್ನು ಕೊಡಲಿಲ್ಲವೆ? ಅದನ್ನು ಯಾಕಾಗಿ ಭಿನ್ನಾಭಿಪ್ರಾಯವಿಲ್ಲ ಅದೇ ಪ್ರಕಾರ ಗಾಮಾಧಿಕಾರಿಗಳಿಗೂ ಕೂಡ ಯಾವಾಗ ಅವರನ್ನು ಆ ಹುದ್ದೆಯಿಂದ ತೆಗೆದುಹಾಕುವ ಕಾಲಕ್ಕೆ ನ್ಯಾಯವಾದ ಕಾಂಪೆನ್ಸೇಷನ್ ಕೊಡಬೇಕೆಂದು ಎಲ್ಲರ ಅಭಿಪ್ರಾಯವೂ ಇದೆ. ಆದರೆ ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗಿರುವ ಪ್ರಕಾರ ಫಾಯಿಂಟ್ ಸೆವೆಕ್ಸ್ ಕಮಿಟಿಯವರು ಇವರಿಗೆ ಕಾಂಪೆನ್ಸೇಷನ್ ಕೊಡುವುದು ಸರಿಯಲ್ಲವೆಂದು ನಾವು ರಾಜಾಯಿಗಳನ್ನು ಮಾತ್ರ *ex-gratia* ಎಂದು ಯಾರಿಗೆ ಎಗತ್ಯವಿದೆಯೋ ಅವರಿಗೆ ಕೊಡಬೇಕೆಂದು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ.

ನನಗನಿಸುವುದು, ಇಲ್ಲಿ ಬರೆದಿರತಕ್ಕ ಪದಗಳನ್ನು ನೋಡಿದರೆ ಅಷ್ಟು ಸರಿಯಾಗಿ ಕಾಣುವುದಿಲ್ಲ. ಏಕೆಂದರೆ ಒಂದು ದೃಷ್ಟಿಯಿಂದ ನೋಡಿದರೆ ಅವರಿಗೆ ಕೊಡತಕ್ಕದ್ದು ಯೋಗ್ಯವೆಂದು ನನಗನಿಸುತ್ತದೆ. ನಮ್ಮ ದೇಶದಲ್ಲಿ ಸುಮಾರು 83,501 ವಿಲೇಜು ಆಫೀಸರುಗಳಾಗಿ ಇಡೀ ಸ್ಟೇಟಿನಲ್ಲಿ ಕೆಲಸ ಮಾಡಿದವರಿಗೆ ಇವರಿಗೆ ನಾವು ಸುಮಾರಾಗಿ ಪರಿಹಾರವನ್ನು ಕೊಟ್ಟರೆ ನಮ್ಮ ಸ್ಟೇಟಿನಲ್ಲಿ ಹಣದ ಅಭಾವ ಎಷ್ಟು ಅಧಿಕವೋ ಎನ್ನುವ ಮುಖ್ಯ ಸಮಸ್ಯೆ ಕೂಡ ನಮ್ಮ ಮುಂದೆ ಇದೆ. ಅವರೆ ನಮಗೆ ಋಣಿಗಳಾಗುತ್ತವೆ, ಹೆಚ್ಚಿಗೆ ಭಾರವಾಗುತ್ತದೆ ಎ ದಾಕ್ಷಣ ಅವರಿಗೆ ಪರಿಹಾರವನ್ನು ಸರಿಯಾಗಿ ಕೊಡುವೆ ಕಳುಹಿಸುವುದು ಅಷ್ಟು ಸರಿಯಲ್ಲ. ಇಲ್ಲಿನ ವರದಿಯಲ್ಲಿ ಎಕ್ಸ್‌ಗ್ರಾಷಿಯಾ ಎಂದು ಒಂದು ಸೂರು ರೂಪಾಯಿಗಳಷ್ಟು ಕೊಟ್ಟರೆ ಸಾಕು ಎಂದಿದೆ. ಹಿಗೆ ಈ ಒಂದುಸೂರು ರೂಪಾಯಿಗಳನ್ನು ಕೊಡುವುದಕ್ಕಿಂತ ಇದನ್ನು ಬಿಟ್ಟಿದ್ದರೂ ಒಳ್ಳೆಯದಿತ್ತು. ಇದನ್ನು ಕೊಡುವಾಗಲೂ ಇವನ್ನು ಗ್ರಾಮಾಧಿಕಾರಿಗಳು ಬೇಡಿ ತೆಗೆದುಕೊಳ್ಳಬಹುದು ಎನ್ನುವ ಅರ್ಥ ಬರುವಂತೆ ಇದರಲ್ಲಿದೆ. ಆದರೆ ಏನನ್ನೂ ಕೊಡದೆ ಕಳುಹಿಸುವುದು ಅಷ್ಟು ಸರಿಯಲ್ಲ. ಅವರಿಗೆ ಕೊಡುವ ಕಾಲಕ್ಕೆ ಚೆನ್ನಾಗಿ ಆಲೋಚನೆ ಮಾಡಿ ಕೊಡಬೇಕೆಂದು ಈ ವರದಿಯಲ್ಲಿ ತಿಳಿಸುವಾಗ ಪೋಡಿಗೆಯ ಏಳು ಪಟ್ಟುರಷ್ಟು ಕೊಡಬೇಕೆಂದು ಹೇಳಿರುವುದು ಸರಿಯಾಗಿದೆಯೇ, ಎಂದು ಇಲ್ಲಿ ನಾನು ಸ್ವಲ್ಪ ತಿಳಿಸಬೇಕಾಗಿದೆ. ಬೊಂಬಾಯಿ ಕರ್ನಾಟಕದಲ್ಲಿ ಗ್ರಾಮಾಧಿಕಾರಿಗಳಿಗೆ ಕಲವು ಜಮೀನುಗಳಿವೆ ಹಳೆಯ ಮೈಸೂರಿನ ಭಾಗಗಳಲ್ಲಿ ಮತ್ತು ಹೈದರಾಬಾದು ಕರ್ನಾಟಕದಲ್ಲಿ ಗ್ರಾಮಾಧಿಕಾರಿಗಳಿಗೆ ಜಮೀನು ಇಲ್ಲ. ಈ ಕಾರಣ ಒಬ್ಬರಿಗೊಬ್ಬರಿಗೆ ಇಲ್ಲ ಸ್ವಲ್ಪ ವೆರವಾಗಿ ತೀರಿಸಬೇಕಾಗುತ್ತದೆ. ಮೂರು ಎಕರೆಗಳಿಗಿಂತ ಕಡಿಮೆ ಭೂಮಿ ಇದ್ದವರಿಗೆ ಮತ್ತು ಜಮೀನು ಇಲ್ಲದೇ ಇರತಕ್ಕ ಈ ಗ್ರಾಮಾಧಿಕಾರಿಗಳಿಗೆ ಅವರನ್ನು ಕಳುಹಿಸುವಾಗ ಅವರ ಪೋಡಿಗೆಯ ಆರು ಪಟ್ಟನಷ್ಟು ಎಂದು ಕೊಡಬಹುದು. ಇಲ್ಲಿರುವಂತೆ ಏಳು ಪಟ್ಟು ಎಂದು ಕೊಡುವುದು ಅಷ್ಟು ಸರಿಯಲ್ಲ. ಆರು ಪಟ್ಟು ಜಮೀನಿಲ್ಲದೇ ಇರತಕ್ಕವರಿಗೆ ಮತ್ತು ಮೂರು ಎಕರೆ ಗಳಿಗಿಂತ ಕೆಳಗಿರತಕ್ಕ ಪಟೇಲ ಶ್ಯಾನುಭೋಗರುಗಳಿಗೆ ಆರು ಪಟ್ಟು ಪೋಡಿಗೆ ಎಷ್ಟು ಪರಿಹಾರವಾಗಿ ಕೊಡುವುದು ನ್ಯಾಯ. ಇದಕ್ಕೆ ಎಲ್ಲರೂ ತಮ್ಮ ಬೆಂಬಲ ಕೊಡುತ್ತಾರೆ ಎಂದು ನಾನಿಲ್ಲಿ ಹೇಳುತ್ತಿದ್ದೇನೆ.

ಶ್ರೀ. ಎಂ. ಸಿ. ನರಸಿಂಹನ್.—ಇದು ತಮ್ಮ ಪಾರ್ಟಿಯಲ್ಲಿ ಆದ ನಿರ್ಣಯವೋ?

ಶ್ರೀಮತಿ ಜನವರಾಜೇಶ್ವರಿ.—ಇದು ನನ್ನ ಅಭಿಪ್ರಾಯ, ಇನ್ನೊಂದು ವಿಷಯ ಎಂದರೆ, ಈಗಿರತಕ್ಕ ಗ್ರಾಮಾಧಿಕಾರಿಗಳ ಜಮೀನಿಗೆ Occupancy Right ಕೊಡುವ ಕಾಲಕ್ಕೆ ಏನು ಕೊಡಬೇಕು ಎನ್ನುವ ಪ್ರಶ್ನೆ ನಮ್ಮ ಮುಂದೆ ಇದೆ. ಈ ಫಾಯಿಂಟು ಸೆವೆಕ್ಸ್ ಕಮಿಟಿ ವರದಿಯ ಪ್ರಕಾರ Inferior Officers ಗಳಿಗೆ ಅವರ full assessment ನ ಮೂರು ಪಟ್ಟು ಇತರ Officers

ಗೆ ಎರಡು ಪಟ್ಟು ಕೊಟ್ಟು ಪೂರ್ತಿ ಹಕ್ಕು ಹೊರಗಬೇಕು ಎಂದು ಇದೆ. ಇದನ್ನು full assessment ನ ಇಪ್ಪತ್ತು ಪಟ್ಟನ್ನು ಎಂದು ಕೊಟ್ಟು ಜಮೀನಿನ ಹಕ್ಕನ್ನು ಪಡೆಯಬೇಕು ಎಂದು ಚಾಯಿಂಟು ಸೆಲೆಕ್ಟು ಕಮಿಟಿಯವರು ಸೂಚಿಸಿದ್ದಾರೆ ಅದು ತುಂಬಾ ಭಾರವಾಗುತ್ತದೆ, ಮತ್ತು ಅನೇಕ ಜನರಿಗೆ ಅಷ್ಟು ದುಡ್ಡನ್ನು ಕೊಟ್ಟು ಈ right ನ್ನು ಪಡೆಯುವುದಕ್ಕೆ ಬಹಳ ಅನಾನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಸ್ವಲ್ಪ ಕಡಿಮೆಯಾಗಿರುವಷ್ಟು ಪಟ್ಟು ಇದಬೇಕೆಂದು, ಕನಿಷ್ಠ inferior servants ಗಳಿಗೆ ಮೂರು ಪಟ್ಟು ಇರಲಿ ಮತ್ತು ಇತರ ಆಫೀಸರುಗಳಿಗೆ ಆರು ಪಟ್ಟು ಇರಲಿ, ಪೂರ್ತಿಯಾಗಿ ಹಕ್ಕನ್ನು ಬಿಟ್ಟು ಕೊಡುವ ಕಾಲಕ್ಕೆ ಇಪ್ಪತ್ತು ಪಟ್ಟು ಎಂದಿರುವುದನ್ನು ಹದಿನೈದು ಪಟ್ಟು full assessment ಆಗಿ ತಗೆದುಕೊಂಡು ಇಲ್ಲಿ ಕೊಡುವುದು ಒಳ್ಳೆಯದು ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನೊಂದು ವಿಷಯ ಎಂದರೆ, ಈ ಹುದ್ದೆಗಳನ್ನು ರದ್ದು ಮಾಡಿದ ಮೇಲೆ ಅವರುಗಳಿಗೆಲ್ಲಾ ಕೆಲಸಗಳನ್ನು ಹೇಗೆ ದೊರಕಿಸಬೇಕು ಎನ್ನುವ ಬಗ್ಗೆ ಕೆಲವು ಸದಸ್ಯರು ಮಾತನಾಡಿದ್ದಾರೆ. ಈಗಾಗಲೇ ಕೆಲವು ಜನರನ್ನು ಪಂಚಾಯತಿಗಳ ಸೆಕ್ರೆಟರಿಗಳನ್ನಾಗಿ ಮಾಡುತ್ತಿದ್ದಾರೆ. ಮತ್ತು ಮುಂದೆ Village Accountants ಅನ್ನುವ ಪೋಸ್ಟುಗಳು Create ಆಗುತ್ತವೆ. ಆಗ ಇವರಲ್ಲಿ ಚೆನ್ನಾಗಿ ಕೆಲಸ ಮಾಡುವವರಿದ್ದರೆ ಅಂತಹವರನ್ನು Village Accountants ಗಳನ್ನಾಗಿ ನೇಮಕ ಮಾಡಿಕೊಳ್ಳಬಹುದು. ಈ ಪ್ರಕಾರ ಇವರನ್ನು ತಗೆದುಕೊಳ್ಳಲಕ್ಕೆ ಆಡ್ಡಿ ಏನಿಲ್ಲ, ಎಂದು ನಾನು ಅಭಿಪ್ರಾಯ ಪಡುತ್ತೇನೆ. ಇಷ್ಟು ಮಾಡಿದರೂ ಕೂಡ ನಮ್ಮ ಸರಕಾರಕ್ಕೆ ಸುಮಾರು ಐದಾರು ಕೋಟಿ ರೂಪಾಯಿಗಳಷ್ಟು ಖರ್ಚು ತಗಲಬಹುದು. ಆದರೆ Regrant ಮಾಡುವಾಗ ಅವರ ಕಡೆಯಿಂದ ವಾಪಸು ಸ್ವಲ್ಪ ಬರುತ್ತದೆ. ಎಷ್ಟು ಭಾರವಾದರೂ ಕೂಡ ಇವರನ್ನೆಲ್ಲಾ ಕಳುಹಿಸಿ ಕೊಡುವ ಕಾಲಕ್ಕೆ ಸರಿಯಾದ ಪರಿಹಾರವನ್ನು ಎಲ್ಲರಿಗೂ ಸಮಾಧಾನವಾಗುವ ಪ್ರಕಾರ ಸರಕಾರ ಕೊಡಲಿ ಎಂದು ನಾನು ಹೇಳುತ್ತೇನೆ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಮುಕ್ಕಣ್ಣಪ್ಪನವರು ಮಾತನಾಡುತ್ತಾ ನಮ್ಮ ರೆವೆನ್ಯೂ ಪಂಡಿತರುಗಳು ಎಣ್ಣೆಯಲ್ಲಿ ಬಿದ್ದ ಹುಳುವಿನ ತರೆ ಒದ್ದಾಡುತ್ತಿದ್ದಾರೆಂದು ಹೇಳಿದರು. ನಿಮ್ಮ ಪಂಡಿತರುಗಳಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಅಂತಹ ಒದ್ದಾಡುವಂತಹ ಮನುಷ್ಯರೇ ಅಲ್ಲ. ಅವರೇ ಇಲ್ಲಿ ಎಷ್ಟೋ controversyಗೆ ಒಳಗಾದ ಬಿಲ್ಲುಗಳನ್ನೆಲ್ಲಾ ಪಾಸು ಮಾಡಿದ್ದಾರೆ. Inam Abolition Bill ಇತ್ಯಾದಿ. ಮತ್ತೆ ಈಗ ಲ್ಯಾಂಡ್ ರಿಫಾರಂಸ್ ಬಿಲ್ಲೂ ಅವರ ಕೈಯಲ್ಲೇ ಇದೆ. ಅದೂ ಈಗ ಸಭೆಯ ಮುಂದೆ ಬಂದಿದೆ. ಅವರು ಬಹಳ ಧಾರಳವಾದ ಜನರು. ಬಹಳ ಸಹಾನುಭೂತಿಯಿಂದ ಗ್ರಾಮಾಧಿಕಾರಿಗಳ ಬಗ್ಗೆ ಇದ್ದೇನೆ. ವಂಶಪಾರಂಪರ್ಯವಾಗಿ ಬಂದಂತಹ ಗ್ರಾಮಾಧಿಕಾರಿಗಳ ಮೇಲೆ ತುಂಬಾ ಗೌರವ ಎದೆ, ಅಭಿಮಾನವಿದೆ ಎಂದು ಈ ಚಾಯಿಂಟು ಸೆಲೆಕ್ಟು ಕಮಿಟಿ ವರದಿಯನ್ನು ಮಂಡಿಸುತ್ತಾ ಹೇಳಿದ್ದಾರೆ. ಇಂತಹ ವಂಶಪಾರಂಪರ್ಯವಾಗಿ ಬಂದಿರುವ ಈ ಜಾರ ಬಗ್ಗೆ ಸಹಾನುಭೂತಿ ಇದೆ ಎನ್ನುವ ಒಂದು ಪಾತ್ಯದಿಂದಲೇ ಅವರು ಎಷ್ಟು ಮಟ್ಟಿಗೆ ಸಹಾನುಭೂತಿಯಿಂದ, ಅಷ್ಟು ಮಟ್ಟಿಗೆ ಸರಿಯಾಗಿ ಪರಿಹಾರವನ್ನು ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಕೊಟ್ಟು ಕಳುಹಿಸಬೇಕಾಗುತ್ತದೆ ಎಂದು ಹೇಳಿರುವುದನ್ನು ನೋಡಿದರೆ ನಮ್ಮ ರೆವೆನ್ಯೂ ನೌಕರರ ಸ್ಥಿತಿ ಎಷ್ಟು ದೊಡ್ಡದಾಗಿದೆ ಎನ್ನುವುದು ಗೊತ್ತಾಗುತ್ತದೆ. ತಾವು ಹೇಳಿದ ಹಾಗೆ ಎಣ್ಣೆಯಲ್ಲಿ ಬಿದ್ದ ಹುಳದಂತೆ ಅವರು ಒದ್ದಾಡುವ ಪರಿಸ್ಥಿತಿಯಲ್ಲಲ್ಲ. ತಾವೇ ಒದ್ದಾಡುತ್ತಿದ್ದೀರಿ. ಆ ಕಾರಣ ತಾವು ದಯವಾಡಿ ಈ ಪ್ರಕಾರ ಅವರನ್ನು ಟೀಕೆ ಮಾಡುವುದು ಸರಿಯಲ್ಲ.

ಶ್ರೀ ಇ. ನಾರಾಯಣ ಗೌಡ.—ಭೂಸುಧಾರಣೆ ವಿಚಾರದಲ್ಲಿ ನಿಮಗೂ ಅವರಿಗೂ ಭಿನ್ನಾಭಿಪ್ರಾಯ ಏಪಟ್ಟೋ?

ಶ್ರೀ. ಸಿ. ಜೆ. ಮುಕ್ಕಣ್ಣಪ್ಪ.—ಸ್ತ್ರೀಧನದ ಬಗ್ಗೆ ಹೆಡ್ಡಾಗಿ ಬೇಕೆಂದು ಕೇಳಿಲ್ಲವೇ ?

Sri KADIDAL MANJAAPA.—what transfered in the joint select Committee should not be disclosed here.

ಶ್ರೀಮತಿ ಬಸವರಾಜೇಶ್ವರಿ.—ಸ್ತ್ರೀಧನದ ವಿಷಯ ಬಂದಾಗ ಎಂದರೆ ಲಾಡು ರಿಪಾರಂಸ್ ಬಿಲ್ಲು ಚರ್ಚೆಯಾಗುತ್ತಿಲ್ಲ. ಆ ಕಾಲ ಬಂದಾಗ ಆಲೋಚನೆ ಮಾಡೋಣ. ಈ ವರ್ಗದವರಿಗೆ ರಿಯಾಯಿತಿಗಳು ಬೇಕು, ಮಹಿಳಾ ವರ್ಗದವರಿಗೆ ಬೇಕೆಂದು ಕೇಳಿದಕ್ಕೆ ನನ್ನ ಮಾನ್ಯ ಮಂತ್ರಿಗಳಿಗೆ ಮಹಿಳೆಯರ ಬಗ್ಗೆ ಬಹಳ ಅಭಿಮಾನವಿದೆ. ಅವರು ಮಾಡಿಯೇ ಮಾಡುತ್ತಾರೆ.

ಇಷ್ಟನ್ನು ಹೇಳಿ ಅಧ್ಯಕ್ಷರು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ಜಾಯಿಂಟು ಸೆಲೆಕ್ಟು ಕಮಿಟಿಯು ರೆಕಮೆಂಡೇಷನ್ನಿನ ಬಗ್ಗೆ ಮಾತನಾಡುವಾಗ ನಾನು ಕೆಲವು ಸೂಚನೆಗಳನ್ನು ಹೇಳಬೇಕೆಂದು ನಿಂತಿದ್ದೇನೆ. ನನ್ನ ಮಾನ್ಯ ಲೆಜಿಸ್ಲೇಟಿವ್ ಮಂತ್ರಿಗಳಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರ ಬಗ್ಗೆ ನನ್ನ ಮಾನ್ಯ ಸಹೋದರಿಯರಾದ ಶ್ರೀಮತಿ ಬಸವರಾಜೇಶ್ವರಿಯವರು ಒಳ್ಳೆಯದಾಗಿ ಶಹಬಾಷ್‌ಗಿರಿಯನ್ನು ಕೊಟ್ಟರು. ನನಗಾವುದೇ ವೈಯಕ್ತಿಕವಾಗಿ ಶ್ರೀಮಾನ್ ಕಡಿದಾಳ್ ಮಂಜಪ್ಪನವರ ವಿಚಾರದಲ್ಲಿ ಬಹಳ ವಿಶ್ವಾಸವಿದೆ. ಆದರೆ ಈ ಸಂದರ್ಭದಲ್ಲಿ, ''ದಂಡಿನಲ್ಲಿ ಸೋದರ ಮಾವನೇ,'' ಎನ್ನುವಂತೆ, ನನ್ನ ಅಭಿಪ್ರಾಯವನ್ನು ಹೇಳದೇ ಹೊದರೆ ನನ್ನ ಕರ್ತವ್ಯ ಲೋಪವಾಗುತ್ತದೆ. ನನಗೆ ಕರ್ತವ್ಯ ಲೋಪವಾಗುವುದಷ್ಟೇ ಅಲ್ಲದೆ ಅವರನ್ನು ಕಾರಣವಾಗಿ ಇಲ್ಲಿ ನಾಲ್ಕು ಮಾತುಗಳನ್ನು ಆಡುವ ಸಂದರ್ಭ ಬಂದರೆ ಅವರಾಗಲೀ ಮತ್ತು ನನ್ನ ಮಾನ್ಯ ಸಹೋದರಿಯರಾದ ಶ್ರೀಮತಿ ಬಸವರಾಜೇಶ್ವರಿಯವರಾಗಲಿ ನನ್ನ ವಿಚಾರದಲ್ಲಿ ಅಷ್ಟು ಕಾರಣ ಮನಸ್ಸಿನವರು ಎಂದು ಅವರು ತಿಳಿಯುವುದು ಎಂದು ಮುಂಚಿತವಾಗಿ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

11-30 A.M.

ಈ ಸೆಲೆಕ್ಟ್ ಕಮಿಟಿ ರಿಪೋರ್ಟಿನ ಪ್ರಕಾರ ಕೆಲವು ಪಟೇಲರಿಗೂ, ಶ್ಯಾನುಭೋಗರಿಗೂ ಕಂಪೆನ್‌ಸೇಷನ್ ಕೊಡುವ ವಿಚಾರದಲ್ಲಿ ಅವರು ಏನಾದರೂ ನಮಗೆ ಗತಿಯಿಲ್ಲ ಎಂದು ಬಂದರೇ! ಇದರಲ್ಲಿ 100 ರೂಪಾಯಿಗಳವರೆಗೆ ಅವರಿಗೆ ದಾನ ಧರ್ಮವಾಗಲಿ ಕೊಡುವುದು ಎಂದು ತಾವು ತಿಳಿಸಿದ್ದೀರಿ. ನನಗೆ ತಿಳಿದಿರುವ ಮಟ್ಟಿಗೆ ಹಳೆಯ ಮೈಸೂರಿನಲ್ಲಿ ಬಹಳೇ ಅಂತಹ ಧರ್ಮ ತೆಗೆದುಕೊಳ್ಳುವಷ್ಟು ಆತ್ಮೀಯ ಭಾವನೆಯಿಂದ ಯಾರೂ ಇಲ್ಲವೆಂದು ಹೇಳುತ್ತೇನೆ. ಅವರು ಒಂದು ವೇಳೆ ತಮಗೆ ಬೇಕಾದವರ ಮನೆಗೆ ಭಿಕ್ಷೆಗೆ ಹೋದರೆ ಸಾಲ. ಆದರೆ ಸರ್ಕಾರದವರನ್ನು ಕೇವಲ 100 ರೂಪಾಯಿಗಳ ಭಿಕ್ಷೆಬೇಡುವ ಹಳೆಯ ಮೈಸೂರಿನಲ್ಲಿ ಯಾವ ಗಾಡನಾಗಲೀ, ಪಟೇಲನಾಗಲೀ ಅಥವಾ ಶ್ಯಾನುಭೋಗನಾಗಲಿ ಯಾರೂ ಹೋಗುವುದೇ ಇಲ್ಲವೆಂದು ನನ್ನ ಖಚಿತ ಅಭಿಪ್ರಾಯ.

ಶ್ರೀ ಕಡಿದಾಳ್ ಮಂಜಪ್ಪ.—ಅಂತಹವರಿಗೆ ಇದು ಅನ್ವಯಿಸುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಂತಹವರಿಗೆ ಅನ್ವಯಿಸುವುದಿಲ್ಲವೆನ್ನುವುದೇನೋ ಸರಿ. ಆದರೆ ನೀವು ಕರ್ತವ್ಯಲೋಪ ಮಾಡುತ್ತೀರಿ. ನಿಮ್ಮ ರಾಜ ಮಹಾರಾಜ ಕಾಲದಲ್ಲಿ ಮತ್ತು ಪಾಳೆಯಗಾರರ ಕಾಲದಲ್ಲಿ ಇದ್ದು ತೆಗದುಕೊಂಡಿದ್ದಂಥ ಹಣ್ಣಿಗೆ ಅವರು ಕೇಳುವಷ್ಟು ಕಂಪೆನ್‌ಸೇಷನ್ ಕೊಟ್ಟು ಅವರನ್ನು ಉಳಿಸಿಕೊಂಡಿರಿ. ಈಗ ಆ ರೀತಿ ಇಲ್ಲ.

ಇವರು ಮಾಡುವ ಕೆಲಸ ಒಂದಲ್ಲ, ಎರಡಲ್ಲ, ಬೇಕಾದಷ್ಟಿವೆ. ಇವರಿಗೆ ರೆವಿನ್ಯೂ ಡಿಪಾರ್ಟ್‌ಮೆಂಟ್ ತಾಯಿಯ ಹಾಗೆ. ಆರೀತಿ ಇರುವಾಗ ತಾಯಿಯೇ ಮಕ್ಕಳಿಗೆ ವಿಷ ಕೊಟ್ಟರು ಎಂದು ಹೇಳಿದರೆ ಏನು ಮಾಡಬೇಕು ? ಪಟೇಲರು ಮತ್ತು ಶ್ಯಾನುಬೋಗರುಗಳಿಗೆ ರೆವಿನ್ಯೂ ಡಿಪಾರ್ಟ್‌ಮೆಂಟ್ ತಾಯಿ ಇದ್ದಹಾಗೆ. ಆದ್ದರಿಂದ ನಿಮ್ಮನ್ನು ತಾಯಿಯಂತೆ ತಿಂಬಿಕೊಂಡಿರುವವರಿಗೆ ನೀವೇ ವಿಷ ಕೊಟ್ಟರೆ ಮಕ್ಕಳಂತಿರುವ ಪಟೇಲ್, ಶ್ಯಾನುಬೋಗರು ಏನು ಮಾಡುತ್ತಾರೆ. ಅಂದರೆ ಈಗ ಆವರು ಇದುವರೆಗೂ ರೆವಿನ್ಯೂ ಇಲಾಖೆ ತಾಯಿಯೋಪಾದಿಯಲ್ಲಿತ್ತು. ಇನ್ನು ಮುಂದೆ ಅದು ಇಲ್ಲ ತಾಯಿ ಸತ್ತುಹೋದಳು ಎಂದು ಗೋಳಾಡಿಕೊಂಡು ಮನೆಗೆ ಹೋಗುತ್ತಾರೆ. ಈಗ ಇನ್ನೊಂದು ವಿಷಯ. ಜೊಂಬಾಯಿ ಪರಿಯಾದಿಂದ ಬಂದಿರುವ ಗಾಯ್ಕವು ನಾಕರರುಗಳಿಗೆ ಉಂಬಳಿ ಜಮೀನು ಇದೆ. ಅದನ್ನು ಅವರಿಗೆ ಕಂದಾಯ ಕಳೆದುಕೊಂಡು ಕೊಡುತ್ತಿದ್ದಾರೆ. ಆದರೆ ನನಗೆ ತಿಳಿದಿರುವ ಮಟ್ಟಿಗೆ ಹಳೆಯ ಮೈಸೂರಿನಲ್ಲಿ ಶ್ಯಾನುಬೋಗರಿಗೆ ಮತ್ತು ಪಟೇಲರಿಗೆ ಉಂಬಳಿ ಜಮೀನು ಇರುವುದಿಲ್ಲ. ಅಂತಹವರಿಗೆ ಏನು ಮಾಡುತ್ತೀರಿ ? ನಿಜವಾಗಿ ಉಂಬಳಿ ಜಮೀನು ಇಲ್ಲದೇ ಇರುವವರಿಗೆ ವಿಚಾರವಲ್ಲಿ ಏನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು. ಇಷ್ಟು ಪಟೇಲ ಮತ್ತು ಶ್ಯಾನುಬೋಗರ ವಿಚಾರವಾಯಿತು. ಇನ್ನು ತೋಟಿ-ತಳವಾರರ ವಿಚಾರ. ಅವರ ಕೈಲ ನೀವು ಕೆಲಸ ಸ್ವಲ್ಪ ತೆಗೆದುಕೊಳ್ಳುತ್ತೀರಾ ? ನೀವಾಗಲೀ, ಡೆಪ್ಯುಟಿ ಕಮೀಷನರೇ ಆಗಲೀ, ರೆವಿನ್ಯೂ ಕಮೀಷನರಾಗಲೀ ರೆವಿನ್ಯೂ ಇನ್‌ಸ್ಪೆಕ್ಟರ್ ಆಗಲೀ, ಅಮುರ್ತಾದಾರರಾಗಲೀ, ಅಸಿಸ್ಟೆಂಟ್ ಕಮೀಷನರ್ ಆಗಲೀ ಅಥವಾ ಇತರ ಆಫೀಸರೇ ಆಗಲೀ ಅವರುಗಳಿಂದ ಬೇಕಾದಷ್ಟು ಕೆಲಸಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಕೆಲವು ಅವರ ಕೆಲಸಗಳನ್ನು ಉದಾಹರಣೆಯಾಗಿ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ತೋರಣ ಕಟ್ಟುವುದು, ಜನರನ್ನು ಹಿಡಿದುಕೊಂಡು ಬರುವುದು, ಸೊಪ್ಪು, ಸೆದೆ ಕೀಳುವುದು, ಜಾಗ್ರತೆಯಾಗಿ ರೆವಿನ್ಯೂ ಕರೆಕ್ಷನ್ ಗೆ ಡಿಮ್ಯಾಂಡ್ ಮಾಡುವುದು, ಕಣಕಾಯುವುದು, ಮುಂತಾದವುಗಳಿಗೆ ರೆಟ್ ತೆಗೆದುಕೊಂಡು ಹೋಗಬೇಕಾದರೆ ಇಲ್ಲಿಂದಲ್ಲಿಗೆ ಓಡಾಡುವುದು. ಈ ರೀತಿ ಕೆಲಸಮಾಡುವಂತಹವರಿಗೆ ಏನು ಕಂಪೆನ್‌ಸೇಷನ್ ಕೊಡುತ್ತಿದ್ದೀರಿ ? ಅವರು ಪಡುವ ಕಷ್ಟವಂತೂ ಹೇಳತೀರದು. ಇವರ ಸ್ಥಿತಿಯನ್ನು ನೋಡಿಯೇ ಇವರು ಕಾದಿದ ಎಣ್ಣೆಯಲ್ಲಿ ಬಿದ ನೊಣದ ಕಾಗೆ ಎಂದು ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ್ದು ನಿಜಾಂಶವಾಗಿದೆ. ಮನೆ ಮಾರಿ ಪರರಿಗೆ ಉಪಕಾರಿ ಎಂದು ಹೇಳುವಹಾಗೆ ನೀವು ಪರರಿಗೆ ಉಪಕಾರ ಮಾಡುವುದಕ್ಕೋಸ್ಕರ ಮನೆಗೆ ಮಾರಿಯ ಹಾಗೆ ಕೂತಿದ್ದೀರಿ. ಇನ್ನು ತೋಟಿ ತಳವಾರರಿಗೆ ನಿರಾಸೆಕೊಡುವ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಅವರಿಗೆ ಒಂದು ಎಕರೆಗೆ 3 ಸೇರು ಎಂದು ಕೊಡುತ್ತಿದ್ದೀರಿ. ಒಂದುವೇಳೆ ಈ 3 ಸೇರನ್ನು ಅವರು ಕೊಡದೇ ಹೋದರೆ ಈ ನಾಕರರು ತಹಸೀಲ್ದಾರರಿಗೆ ಅಪೀಲುಮಾಡಿ ಅವನು ನಿಶ್ಚಯಮಾಡಿದ್ದರಲ್ಲಿ ಹವಿನಾರನೆಯ ಒಂದು ಭಾಗವನ್ನು ಕಂಪೆನ್‌ಸೇಷನ್ ರೂಪವಾಗಿ ಕೊಡುತ್ತೀವೆಂದು ತೀರ್ಮಾನ ಮಾಡಿದ್ದೀರಿ ಈಗ ಸಾಮಾನ್ಯವಾಗಿ ನಮ್ಮ ತಾಲ್ಲೂಕಿನಲ್ಲಿ ಎಷ್ಟು ಎಕರೆ ಕಲ್ವಟೇಜ್ ಏರಿಯಾ ಇದೆ ಎಂಬುದು ತಮಗೆ ಚೆನ್ನಾಗಿ ಗೊತ್ತಿದೆ. ಅವರಿಗೆ ಎಷ್ಟು ಭಾಗ ಕೊಡುವುದೆಂಬುದನ್ನು ನೀವು ಚೆನ್ನಾಗಿ ಲೆಕ್ಕಮಾಡಿ ಕೊಡಿ. ತಹಸೀಲ್ದಾರ್ ನಿಶ್ಚಯಮಾಡಿದ್ದರಲ್ಲಿ ಇಷ್ಟನ್ನೇ ಭಾಗ ಕೊಡುತ್ತೇವೆಂದು ಹೇಳಿದ್ದು ಯಾವ ಧರ್ಮ ? ನೀವು ಮಾಡುವ ಕೆಲಸಗಳಿಗೆ ಬಗ್ಗೆ ನಿಜವಾಗಿ ಅವರಿಗೆ ಸರಿಯಾದ ಮನಸ್ಸು ಇದೆಯೇ ? ಇಂತಹ ಮಾತುಗಳನ್ನು ನಮ್ಮ ನಮ್ಮನೆ ಪತಕ್ಕೆ ಇಲ್ಲಿ ತೆಗೆದುಕೊಂಡು ಬರುತ್ತೀರಾ ?

ಶ್ರೀ ಕವಿದಾಳ್ ಮಂಜಪ್ಪ.—ನಿಮಗೆ ಅರ್ಥವಾಗುವುದಿಲ್ಲ. ಅದಕ್ಕೆ ಆರೀತಿ ಮಾತನಾಡುತ್ತಿದ್ದೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ಹೇಳಿದರೆ ಅರ್ಥವಾಗುತ್ತದೆ. ನಾವು ಐದೈದು ಸಾರಿ ಅವನ್ನು ಓದಿದರೂ ಅರ್ಥವಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮಗೆ ಇದು ಅರ್ಥವಾಗದೇ ಇರುವುದರಿಂದಲೇ ದಿನ ಗಟ್ಟಲೆ ಈ ಮಸೂದೆ ಮುಂದೆ ಮುಂದೆ ಹೋಗುತ್ತಿದೆ.

ಶ್ರೀಮತಿ ಕೆ. ಎಸ್ ನಾಗರತ್ನಮ್ಮ.—ಪಟೇಲರುಗಳಿಗೆ ; ಕಾರ್ಯನುಬೋಗರುಗಳಿಗೆ ಒರಿಜಿನಲ್ ಬಿಲ್ಲಿನಲ್ಲಿರುವ ಹಾಗೆ ಕಂಪೆನ್‌ಸೇಷನ್ ಕೊಡುತ್ತೇವೆಂದೂ ಅದಕ್ಕಾಗಿ ಕೋಟಿಗಟ್ಟಲೆ ಖರ್ಚಾಗುತ್ತದೆಂದು ಹೇಳಿದರು. ಬಹುಶಃ 7 ಪಟ್ಟು ರಷ್ಟು ಅವರಿಗೆ ಕೊಟ್ಟರೆ ಸಾಮಾನ್ಯವಾಗಿ 4½ ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಇಲ್ಲಿ 4 ಜನ ಮಂತ್ರಿಗಳು ಜೇರೆ ಜಾಸ್ತಿ ಆದರಲ್ಲಾ ! ಇವರಿಗೆ ಖರ್ಚುಮಾಡುವ ದುಡ್ಡು ಇದ್ದರೆ ಗ್ರಾಮಾಡಿಕಾರಿಗಳಿಗೆ ಹೆಚ್ಚಿಗೆ ಇನ್ನೂ ಕಂಪೆನ್‌ಸೇಷನ್ ಕೊಡುವುದಕ್ಕೆ ಆಗುತ್ತಿರಲಿಲ್ಲವೇ ! ನೀವು ಖರ್ಚುಮಾಡುವುದರಲ್ಲಿ ಯಾವ ಪಟ್ಟಣಲ್ಲಿ ಇಕಾನಮಿ ಮಾಡಿದ್ದೀರಿ ? ತಿಳಿಸಿ ಇನ್ನೂ ಹೊಸ ಹೊಸ ತೆರಿಗೆಗಳನ್ನೇನೋ ಜಾಸ್ತಿಮಾಡುತ್ತಿದ್ದೀರಿ. ದಸರಾ ಸಂದರ್ಭದಲ್ಲಿ ಮಹಾರಾಜರಿಗೆ ಬೇಕಾವಷ್ಟು ಹಣವನ್ನ ಖರ್ಚುಮಾಡುತ್ತಿದ್ದೀರಿ. ಒಬ್ಬೊಬ್ಬ ಮಂತ್ರಿಗಳಿಗೆ ಟಿ. ಎ. ಮತ್ತು ಡಿ. ಎ. ಖರ್ಚು ಎಷ್ಟೋ ಆಗುತ್ತದೆ. ಒಂದು ಸಾವಿರ ರೂಪಾಯಿಗಳ ಸಂಬಳ ಕೊಟ್ಟು ಒಬ್ಬ ಗೌರ್ನಮೆಂಟ್ ಸೆಕ್ರೆಟರಿ, ಅವನಿಗೆ ಒಬ್ಬ ಅಂಡರ್ ಸೆಕ್ರೆಟರಿ ಇನ್ನೊಬ್ಬ ಅಸಿಸ್ಟೆಂಟ್ ಸೆಕ್ರೆಟರಿ, ಆಮೇಲೆ ಒಂದು ಕಮಿಟಿ, ಅದಕ್ಕೆ ಒಬ್ಬ ಚೇರ್‌ಮನ್ ಮತ್ತೆ ಅದಕ್ಕೆ ಕೆಲವು ಮೆಂಬರುಗಳು—ಈ ರೀತಿ 108 ಕಮಿಟಿಗಳಿಗೆ ಸರ್ಕಾರದುದ್ದು ಖರ್ಚುಮಾಡುವುದು ಸರಿಯಲ್ಲ. ಇಲ್ಲವಿದ್ದರೆ ದುಡ್ಡು ಇವರುಗಳಿಗೆಲ್ಲಾ ಎಲ್ಲಿಂದ ಬರುತ್ತದೆ ? ಗ್ರಾಮನೌಕರರುಗಳು ಬಹಳ ವರ್ಷಗಳಿಂದ ಚೆನ್ನಾಗಿ ದುಡಿದು ಸೇವೆ ಮಾಡಿಕೊಂಡು ಬಂದಿರುವಾಗ ಅಂತಹವರಿಗೆ ಕೇವಲ 100 ರೂಪಾಯಿಗಳನ್ನು ತೆಗೆದುಕೊಳ್ಳಿ ಎಂದು ಹೇಳಿದರೆ ಎಷ್ಟು ಚೆನ್ನಾಗಿದೆ ! ಅವರ ಗತಿ ಹೇಳತೀರದು. ಅವರು ವರ್ಷಾನುಗಟ್ಟಲೆಯಿಂದ ಬರೆದಿರುವ ರೆಜಿಸ್ಟರುಗಳನ್ನು ಪಹಣಿ ರೆಜಿಸ್ಟರುಗಳನ್ನು ನೋಡಿದರೆ ಖಂಡಿತವಾಗಿ ಕಡಮೆಯಾಗಿ ಕಂಪೆನ್‌ಷೇಷನ್ ಕೊಡುವುದಕ್ಕಾಗುವುದಿಲ್ಲ. ಅವರನ್ನು ಮೊಟ್ಟ ಮೊದಲನೆಯದಾಗಿ ಹೆಚ್ಚಿಗೆ ಗೌರವಿಸಬೇಕು. ಅವರಿಗೆ ನಮಸ್ಕಾರಮಾಡಿ ಎಷ್ಟು ಪಟ್ಟು ಕಂಪೆನ್‌ಸೇಷನ್ ಕೊಡುತ್ತೀರೋ ಅದನ್ನು ಗೌರವ ಧನರೂಪವಾಗಿ ಕೊಡಬೇಕು. ಈರೀತಿ ಮಾಡದೆ ಕೇವಲ 100–50 ರೂಪಾಯಿಗಳನ್ನು ಭಿಕ್ಷೆಮಾಡುವ ಹಾಗೆ ಅವರಿಗೆ ಕೊಡಬೇಡಿ. ದಾನ ಧರ್ಮ ಎಂಬುದಾಗಿ ಕೊಡುವುದು ನಿಜವೆಂದು ಈ ಮಸೂದೆಯಲ್ಲಿ ಸೇರಿರುವುದು ಬಹಳ ಶೋಚನೀಯ. ಶ್ರೀಮಾನ್ ಮುಂಜಪ್ಪನವರೇ ಇದರಿಂದ ನಿಮಗೆಲ್ಲಾ ಅಗಾರವ, ನಮಗೂ ಅಗಾರವ, ಎಲ್ಲರಿಗೂ ಅಗಾರವ. ಈರೀತಿ ಅಗಾರವನ್ನುಂಟುಮಾಡಿಕೊಳ್ಳುವುದಕ್ಕೆ ಹೋಗಬೇಡಿ. ನಿಜವಾಗಿ ಈ ಮಸೂದೆಯನ್ನು ಜಾರಿಗೆ ತರಬೇಕಾದರೆ ತೋಟಿ ತಳವಾರರಿಗೆ ಮತ್ತು ನೀರುಗಂಟಿ ಅವರಿಗೆ ಎಷ್ಟಾಸೆಯನ್ನು ವರ್ಷಕ್ಕೆ ಎಷ್ಟುಪಟ್ಟು ಕೊಡುತ್ತೀರೋ ಅದೇ ರೀತಿ ಕಬ್ಬುಮಾಡಿ ಪಟೇಲರಿಗೂ ಮತ್ತು ಕಾರ್ಯನುಬೋಗರಿಗೂ ಕಂಪೆನ್‌ಸೇಷನ್ನನ್ನು ಪೋಲಿಗೆಯ 10ರಷ್ಟು ಕೊಟ್ಟು ಅವರುಗಳ ಗೌರವ ಮತ್ತು ವಿಶ್ವಾಸವನ್ನು ಪಡೆಯುತ್ತೀರೆಂದು ಹೇಳಿ ನನಗೆ ಇಷ್ಟು ಹೆತ್ತು ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ರಿಪ್ಪ (ಚಿತ್ರದುರ್ಗ).—ಅಧ್ಯಕ್ಷರೇ ; ಈ ಮಸೂದೆಯನ್ನು ನಾನು ಸಮರ್ಥನೆ ಮಾಡುತ್ತಾ ಕೆಲವಾರು ಮಾತುಗಳನ್ನು ಹೇಳಬೇಕೆಂದು ನಾನು ಇಚ್ಛಿಸುತ್ತೇನೆ. ನಿನ್ನೆ ಶ್ರೀಮಾನ್ ಪುಟ್ಟಸ್ವಾಮಿಯವರು ಮಾತನಾಡುತ್ತಾ ಮೈಸೂರು ಸಂಸ್ಥಾನದಲ್ಲಿ ಶ್ರೀಮಾನ್ ಮಂಜಪ್ಪನವರ ಹೆಸರು ಚಿರಸ್ಥಾಯಿಯಾಗಿ ಉಳಿಯುತಕ್ಕ ಪ್ರಸಂಗ ಈಗ ಬಂದಿದೆಯೆಂದು ಹೇಳಿದರು. ಏಕೆಂದರೆ ಈ ಲ್ಯಾಂಡ್ ರೆವಿನ್ಯೂಷನ್ ಆಗ್ರೇರಿಯನ್ ರಿಫಾರಮ್ಸ್ ಸಂಬಂಧಪಟ್ಟಂಥ ಅನೇಕ ಕಾನೂನುಗಳನ್ನು ಈ ನಮ್ಮ ಸಭೆಯಲ್ಲಿ ಎಷ್ಟೋ ವರ್ಷಗಳ

ಹಿಂದೆಯೇ ಮುಂದಿಸಿದ್ದರು ಎಂಬುದಾಗಿ ನಾನು ಹೇಳುತ್ತೇನೆ. ಆಗಲೂ ಈ ವಿಚಾರವನ್ನು ಪ್ರಸ್ತಾಪ ಮಾಡಿದರು. 700-800 ವರ್ಷಗಳ ಹಿಂದೆ ಭೂಮಿಗೆ ಸಂಬಂಧಪಟ್ಟಂತಹ ರೀತಿಯಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿರುವ ರೈತನಿಗೂ ಮತ್ತು ರಾಜ್ಯಾಧಿಕಾರಿಗಳಿಗೂ ಒಳ್ಳೆಯ ಸಂಬಂಧವಿತ್ತು. ಆಗಿನ ಕಾಲದಲ್ಲಿ ಯಾವರೀತಿ ಪ್ರಜೆಗಳ ಹಿತರಕ್ಷಣೆಗಾಗಿ ನರ್ವಾಹ ದವರು ಕಾನೂನುಗಳನ್ನು ಮಾಡುತ್ತಿದ್ದರೋ ಅದೇ ರೀತಿ ಈಗಿನ ನಮ್ಮ ಮಂತ್ರಿಮಂಡಲ ದವರೂ ಸಹ ಕಾನೂನುಗಳನ್ನು ಜಾರಿಗೆ ತರುವುದರಲ್ಲಿ ಉತ್ಸುಕರಾಗಿದ್ದಾರೆಂದು ಹೇಳಿದರೆ ಅದನ್ನೂ ಉತ್ಪ್ರೇಕ್ಷೆ ಆಗಲಿಕ್ಕಿಲ್ಲ. ನನ್ನ ಮಿತ್ರರು ಒಬ್ಬರು ಈ ವಿಚಾರವಾಗಿ ಮಾತನಾಡುತ್ತಾ ಇವರು ಮನೆಗೆ ಮಾತ್ರ ಬರಲಿಗೆ ಉಪಕಾರಿ ಎಂದು ಹೇಳಿದರು. ಅದು ಬಹಳ ಶ್ಲಾಘನೀಯವಾದ ಮಾತು. ಇತರರಿಗೆ ಅನುಕೂಲ ಮಾಡಿಕೊಡುವತಕ್ಕದ್ದು ಅವರ ನಿಜವಾದ ಗುಣ. ಎಲ್ಲೋ ಅದನ್ನು ನೋಡಿಯೇ ಅವರ ಬಾಯಿಯಲ್ಲಿ ಈರೀತಿ ದೇವರು ಅವಿಸಿದ್ದಾನೆಂದು ನಾನು ಹೇಳಬೇಕಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಇಂತಹವರ ತ್ಯಾಗ ಬುದ್ಧಿಯನ್ನು ನೋಡಿಯೇ ಇವರನ್ನು ಜೀವಮಾನರ್ನಾಗಿ ನೀವು ಮಾಡಿದರಲ್ಲವೇ ?

ಶ್ರೀ ಜಿ. ಶಿವಪ್ಪ.—ನಾನೇನು ಶ್ರೀಮಾನ್ ಮುಕ್ಕಣ್ಣಪ್ಪನವರನ್ನು ಮಂತ್ರಿಗಳಾಗಿ ಮಾಡಿಕೊಳ್ಳಿ ಎಂದು ಕೇಳುವುದಿಲ್ಲ. ಹೀಗೆ ಮಾತು ಮಾತಿಗೂ ಏನೇನು ಪ್ರಸಂಗಗಳು ಬಂದು ಬಿಡುತ್ತವೆ. ದಾನಯ್ಯಗುಡಿ ಮುಂದೆ ಹೋಗಿ ಯಾವಾಗಲೂ ಏನುಮಾಡುತ್ತಾನೆ. ಅಂದರೆ ಟಂಗ್‌ಟಿಗ್ ಎಂದು ಜಾಗಟೆ ಶಬ್ದಮಾಡುತ್ತಿರುತ್ತಾನೆ. ಇವರು ಮಧ್ಯೆ ಮಧ್ಯೆ ಇಂಟರ್ ಫಿಯರ್ ಮಾಡುವದು ಅರೀತಿಯಾಗುತ್ತದೆ. ನನಗೆ ಈ ಬಗ್ಗೆ ಘಂಟೆಗಟ್ಟಲೆ ಉತ್ತರ ಕೊಡುವುದಕ್ಕೆ ಬರುತ್ತದೆ. ಆದರೆ ಬೇಡ.

ಸ್ವಾಮಿ. ಹೊಟ್ಟೆ ಉರಿಯುವಂಥ ತಪ್ಪನ್ನೇನೂ ಮಾಡಿಲ್ಲ. ಸುಪ್ರೀಂಕೋರ್ಟು ಜಡ್ಜ್‌ಮೆಂಟ್ ಬಹಳ ಶಬಂದಿದ್ದು 1959 ನೇಯ ಇಸವಿಯಲ್ಲಿ, ಆ ಜಡ್‌ಮೆಂಟ್ ಆದಮೇಲೆ ಒರಿಜನಲ್ ಬಿಲ್ಲನ್ನು ಅಸೆಂಬ್ಲಿಯೊಳಗೆ ನಮ್ಮ ಮಂತ್ರಿಗಳು ಇಂಟ್ರೊಡ್ಯೂಸ್ ಮಾಡಿದ್ದಾರೆ.

ಶ್ರೀ ಕವಿದಾಳ್ ಮಂಜಪ್ಪ (ರೆವಿನ್ಯೂ ಮಂತ್ರಿಗಳು).—ಇಲ್ಲ, ಇಲ್ಲ ಸುಪ್ರೀಂಕೋರ್ಟ್ ಡಿಸಿಶನ್ ಡಾಯಿಂಟ್ ಸೆಲೆಕ್ಟ್ ಕಮಿಟಿಯವರು ಬಿಲ್ಲನ್ನು ಪರಿಶೀಲನೆ ಮಾಡುವ ಹೊತ್ತಿಗೆ ಬಂದಿದ್ದು.

ಶ್ರೀ ಜಿ. ಶಿವಪ್ಪ.—ಅಂತೂ ಕಾನ್‌ಸ್ಟಿಟ್ಯೂಶನ್ ಪ್ರಕಾರ ಜಡ್ಜ್‌ಮೆಂಟ್ ಬಂದು ಇವರ ಹಕ್ಕುಗಳು ಹೋಗಿವೆ. ಕಾನ್‌ಸ್ಟಿಟ್ಯೂಶನ್ ಜಾರಿಗೆ ಬರುತ್ತಲು ಹೋದವ, ಯಾರೂ ನೋಡಿ ಕೊಂಡಿರಲಿಲ್ಲ. ಕಾನ್‌ಸ್ಟಿಟ್ಯೂಶನ್ ಪ್ರಕಾರ ರಾ ಇಂಟರ್ ಪ್ರಿಟ್ ಮಾಡಿ ಕೊಚ್ಚಿರುವ ಜಡ್ಜ್‌ಮೆಂಟಿಗೆ ಮಾನ್ಯತೆ ಕೊಡುವುದು ನಮ್ಮ ಕರ್ತವ್ಯ. ಜಡ್ಜ್‌ಮೆಂಟ್ ಆದಮೇಲೆಯೂ, ಕಾನ್‌ಸ್ಟಿಟ್ಯೂಶನ್ ಪ್ರೊವಿಜರ್ ತೀರ್ಪುಗಾರರೇ, ಪಬ್ಲಿಕ್ ಸರ್ವೆಂಟ್ಸ್ ಅವರ ಕೆಲಸಗಳನ್ನು ಮಾಡಿಕೊಂಡೇ ಬಂದಿದ್ದಾರೆ, ಇವತ್ತು ಕೆಲಸ ಮಾಡುತ್ತಾ ಇದ್ದಾರೆ. ಅವರು ಯಾವುದಾದರೂ ಒಂದು ಕಾನೂನಿನ ತಕ್ಷಣಿಯ ಮೇಲೆ ಕೆಲಸ ಮಾಡುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ಒಟ್ಟಿನಲ್ಲಿ ಇವತ್ತೂಕೂಡ ಪಬ್ಲಿಕ್ ಸರ್ವೆಂಟ್ಸ್ ಡ್ಯೂಟೀಸ್ ಮತ್ತು ರೆಸ್‌ಪಾನ್ಸಿಬಿಲಿಟಿಗಳನ್ನು ಡಿಸ್‌ಚಾರ್ಜ್ ಮಾಡುತ್ತಿದ್ದಾರೆ ಏನೋ ಒಂದು ಇಂಪ್ಲೈಡ್ ಅಗ್ರಿಮೆಂಟ್ ಮೇಲೆ ಕೆಲಸ ಮಾಡುತ್ತಾ ಇದ್ದಾರೆಯೆ? ಪಿಸ, ಒಂದು ಕಾನೂನು ಪಕ್ಕ ರಲ್ಲವೇ ಅಲ್ಲ, ಸರ್ಕಾರ ಮಾಡಲು ಬೇಕಾಗಿ ಅವರನ್ನು ತಾತ್ಕಾಲಿಕವಾಗಿ ಮುಂದುವರಿಸಿಕೊಂಡು ಬರುತ್ತಾ ಇದ್ದಾರೆ. ಪಬ್ಲಿಕ್ ಸರ್ವೆಂಟ್ ಒಂದು ಕಚ್ಚಿನ ಜವಾಬ್ದಾರಿಯಿಂದ ಕೆಲಸ ಮಾಡಿದ್ದಾರೆಂದು ಅನೇಕ ಸದಸ್ಯರು ಹೇಳಿರು. ನಿಜವಾಗಿಯೂ ಅವರು ರಾಜ್ಯದ ಆಡಳಿತಸ್ವಿನಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಿದ್ದರು. ಅವುಲ್ಲಿ ಕೆಲವರು ಮಂದಿ ಜನಗಳಿಗೆ ತೊಂದರೆ ಕೊಟ್ಟಿರಬಹುದು;

ಅವರು ಮೈನಾರಿಟಿಯಲ್ಲಿದ್ದಾರೆ. ಆಪರಲ್ಲಿ ಸ್ವಲ್ಪ ಜನ ಇಲ್ಲದ ಲೆಕ್ಕಗಳನ್ನು ಬರೆದಿರಬಹುದು ಆದ್ದರಿಂದ ಎಲ್ಲರೂ ಅವೇರಿತಿ ಮಾಡಿದ್ದಾರೆಂದು ಹೇಳುವುದು ಸ್ಯಾಗುವುದಿಲ್ಲ. ಯಾವ ರೆವಿನ್ಯೂ ಆಫೀಸರೇ ಆಗಲಿ, ರೆವಿನ್ಯೂ ಇನ್ಸ್‌ಪೆಕ್ಟರು, ತಹಶೀಲ್ದಾರ್‌ರಿಂದ ಹಿಡಿದು, ಟೂರ್ ಹೋದಾಗ, ಇನ್ಯಾರೂ ಬೇಕಾಗಿಲ್ಲ. ಪಬ್ಲಿಕ್ ಪ್ರಾಸಿಕ್ಯೂಟರು ಎಲ್ಲಿ ಎಂದು ಕೇಳುತ್ತಾರೆ. ಪಬ್ಲಿಕ್ ಪ್ರಾಸಿಕ್ಯೂಟರ್, ಗೂಟ ಪ್ರಾಸಿಕ್ಯೂಟರ್, ಮುಂತಾದ ಸ್ಥಿತಿ ನಿರ್ಮಾಣಗಳನ್ನು ಒದಗಿಸಿಕೊಡಬಹುದಾದಂಥವರು ಅವರು. ಕೆಲವು ಪಬ್ಲಿಕ್ ಪ್ರಾಸಿಕ್ಯೂಟರುಗಳು ಎಲ್ಲಿಯೋ ತೆಂಗಿನ ಗರಿಯನ್ನು ಕೆತ್ತುತ್ತಾರೆ, ಜನರಿಗೆ ಕಿರುಕುಳ ಕೊಡುತ್ತಾರೆ. ಅದ್ದರಿಂದ ಎಲ್ಲರೂ ಕೊಟ್ಟಿದ್ದಾರೆ ಹೇಳುವುದು ಸರಿ ಎಲ್ಲ. ಆದರೆ ಸುಪ್ರೀಂಕೋರ್ಟಿನ ಅಭಿಪ್ರಾಯವನ್ನು ಎಲ್ಲ ಗೌರವಿಸಬೇಕಾಗಿದೆ. ಯಾರೂ ಸಿದ್ಧವಿಲ್ಲ, ಇತ್ತೀಚೆಗೆ ಇಳಿಯೋ ಆದನ್ನು ಜನರಿಗೆ ಕೊಡಲೇ ಬೇಕಾಗಿತ್ತು ಆ ತೀರ್ಪನ್ನು ದಪ್ಪಿ ಯಲ್ಲಿಟ್ಟುಕೊಂಡು, ಜಾಯಿಂಟ್ ಸೆಲೆಕ್ಟ್ ಕಮಿಟಿ ಎಷ್ಟರವರೆಗೆ, They are not entitled to any compersion ಎಂದು ರೈಟ್‌ಪುರಾಗಿ ಹೇಳಿವ್ವಾರೆ. *Ex-qratia* payment ನ ರೂಪಾಯಿ ಪಾವತಿ ಕೊಡುವುದು ಸಾಧುವಾಗಿದಲ್ಲ, ಇನ್ನು ಜಾಸ್ತಿ ಕೊಡಬೇಕೆಂಬ ಅಭಿಪ್ರಾಯ ಈ ಸಭೆಯಲ್ಲಿ ಬಂದಿದೆ. ನಮ್ಮ ಸರ್ಕಾರದವರು ಈ ಅಭಿಪ್ರಾಯವನ್ನು ಕೂಲಂಕಷವಾಗಿ ಯೋಚನೆ ಮಾಡಿ, ಕಾನೂನನ್ನು ಸೂಕ್ತವಾಗಿ ಬದಲಾವಣೆ ಮಾಡಿ, ಅವರಿಗೆ ಕಾಂಪೆನ್ಸೇಶನ್ನು ಸರಿಯಾದ ಪ್ರಮಾಣದಲ್ಲಿ ಕೊಡುವಂತೆ ಮಾಡಿ ತಕ್ಕ ರೀತಿಯಲ್ಲಿ ಕೊಡಬೇಕು, ಅವರನ್ನು ಕೆಲಸ ದಿಂದ ವಿಮುಕ್ತರನ್ನಾಗಿ ಮಾಡುವಾಗ, ಬೀಳ್ಕೊಡುವಾಗ, ಅವರ ಮುಸ್ಸಿಗೆ ನೋವನ್ನುಂಟು ಮಾಡುವಾದು. ಅವರು ಪರಿಹಾರ ಎಷ್ಟು ನಿರೀಕ್ಷಣೆ ಮಾಡಿದರೆ ಆ ಅಷ್ಟನ್ನು ಕೊಡಲಿಕ್ಕೆ ಸಾಧ್ಯವಾಗದಿದ್ದರೂ, ಅವರಿಗೆ ಒಂದು ನಿರ್ದಿಷ್ಟವಾದ ಪರಿಹಾರವನ್ನು ಕೊಡಬೇಕೆಂದು, ಏನು ಬಿಲ್ಲಿನಲ್ಲಿ ಪ್ರೊವೈಡ್ ಮಾಡಿದ್ದೆವೆ ಹೇಗೆ, ಕಷ್ಟು ಪಟ್ಟಿಗಾದರೂ ಕೊಡಲಿಕ್ಕೆ ನಮ್ಮ ಸರಕಾರ ಪ್ರಯತ್ನ ಮಾಡುತ್ತಿರುವುದು ನಾಗರಿಕರಿಗೆ ಭರವಸೆ ಇದೆ. ನಾವೇನಾದರೂ ಕೂಡ ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟಿನಲ್ಲಿ ಹೆಚ್ಚಿನ ರೀತಿಯ ಕಾಂಪನ್ಸೇಶನ್ ಪ್ರೊವೈಡ್ ಮಾಡಿದ್ದರೆ, ಇದೇ ರೀತಿಯಲ್ಲಿ ವಿರೋಧ ಪಕ್ಷದವರು ಅವನ್ನೆಲ್ಲ ಅಪ್ರೋವ್ ಮಾಡುತ್ತಾ ಇದ್ದರು. ಈ ಸಭೆಯಲ್ಲಿ ಕಾಂಗ್ರೆಸ್ ಪಕ್ಷದವರು ದೇಶದ ದೃಷ್ಟಿಯಿಂದ ಜನತೆ ದೃಷ್ಟಿಯಿಂದ ಏನಾದರೂ ಸಲಹೆಗಳನ್ನು ತಂದರೆ, ನಮ್ಮ ವಿರೋಧಪಕ್ಷದ ಸ್ನೇಹಿತರು ಅವುಗಳ ಮೆರಿಟ್ ಮತ್ತು ಡಿಮೆರಿಟ್ ನೋಡದೆ, ನಮ್ಮನ್ನೆ ವಿರೋಧಿಸುವುದಕ್ಕಾಗಿ ವಿರೋಧಿಸುವ ಅನೇಕ ನಿದರ್ಶನಗಳನ್ನು ಕೊಡಬಲ್ಲೆ.

Sri C. J. MUCKANNAPPA.—Sir, I rise to a point of order. Rule 77 of the Rules of Procedure deal with the scope of debate on the report of the Select Committee. It says :

> "The debate on a motion that the Bill as reported by the Select or Joint Select Committee be taken into consideration, shall be confined to consideration of the report of the Select or Joint Select Committee and the matters referred to in that report or any alternative suggestions consistent with the principle of the Bill."

Why should he refer back and go on beating the dead past ? All these remarks would have been relevant at the time of the consideration of the Bill. Now what is before us is the report of the Joint Select Committee and that is under consideration. We cannot now go beyond the scope of the debate on the report of the Joint Select Committee. May I request the Chair to call the Hon'ble Member to order and to ask him to confine himself to the scope of the debate on the report of the Joint Select Committee ? I request the Chair to call him to order.

Sri G. SIVAPPA.—I am in good order.

ನಾನು ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್ ಬಿಟ್ಟು ಬೇರೆ ಏನನ್ನೂ ಮಾತನಾಡುತ್ತಾ ಇಲ್ಲ. I am speaking only with reference to the original Bill. original ಬಿಲ್ಲಿಗೆ ರೆಫರ್ ಮಾಡಿದ ದಬೆಂದೇನೂ ಇಲ್ಲ. ಸಮ್ಮ ವಿರೋಧ ಪಕ್ಷದವರು ನನ್ನನ್ನು ಟೀಕೆ ಮಾಡಿದಾಗ, ಹೀಗೆ ಎದ್ದು ಕೂತು ಅವರ ಭಾಷಣಗಳಿಗೆ ಅಡ್ಡಿ ಬರಲಿಲ್ಲ, ನಾವು ಅವರನ್ನು ಸಾವಧಾನವಾಗಿ ಕೇಳುತ್ತಿದ್ದೆವೆಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ನೂರು ರೂಪಾಯಿ *ex-gratia* payment ಸಾಲದೆಂದು ಕಾಗ್ರೆಸ್ ಪಕ್ಷದವರಿಂದಲೂ ಕೂಡ ಈ ಸಭೆಯಲ್ಲಿ ಅಭಿಪ್ರಾಯ ಹೆಚ್ಚಿನ ರೀತಿಯಲ್ಲಿ ಬಂದಿತ್ತು, ಈ ರೀತಿ ಮಾಡಿರತಕ್ಕ ಕಾದ್ದು ಸರಿಯಾದುದಲ್ಲ, ಅದನ್ನು ಸರಿಪಡಿಸತಕ್ಕಂಥಾದ್ದು ಈ ಸಭೆಯ ಕರ್ತವ್ಯ ನಮ್ಮ ಸ್ನೇಹಿತರಲ್ಲಿಯೂ ಈ ರೀತಿ ಬದಲಾವಣೆ ಆಗಬೇಕಾದುದು ಅವಶ್ಯಕವೆಂಬ ಅಭಿಪ್ರಾಯ ಬಂದಿದೆ. ನಾವು ಜಾಸ್ತಿಮಾಡಿ ಕೊಟ್ಟಾಗ, ಸರ್ಕಾರದವರು ಕೊಳ್ಳೆ ಹೋಡಿದಾಗಿದೆ ಎಂದು ಹೇಳಿ ಅನೇಕ ಸಭೆಗಳಲ್ಲಿ ಅಪೇನ್ ಮಾಡಿದ್ದು ನನಗೆ ಗೊತ್ತು. I can quote instances.

ನಮ್ಮ ಗ್ರಾಮಾಧಿಕಾರಿಗಳು ದೇಶಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆಂದು ನನ್ನ ಅನೇಕ ಮಾನ್ಯ ಮಿತ್ರರುಗಳಾಗಲೇ ತಿಳಿಸಿದ್ದಾರೆ. ಸರ್ಕಾರದವರು ಈ ವಿಷಯಗಳನ್ನೆಲ್ಲ ಗಮನಕ್ಕೆ ತೆಗೆದುಕೊಂಡು ಸಾಕ್ಷ ಬದಲಾವಣೆ ಮಾಡಬೇಕಾದುದು ಅತ್ಯಗತ್ಯ. ಕಾನೂನಿನಲ್ಲಿ ಏನೇ ಇರಲಿ, ಸುಪ್ರೀಂ ಕೋರ್ಟಿನ ತೀರ್ಮಾನವೇನೇ ಇರಲಿ, ಇವರಿಗೆ ತಕ್ಕ ಪರಿಹಾರ ಕೊಡುವುದು ಸೂಕ್ತವಾದುದೆಂದು ಹೇಳುತ್ತೇನೆ. ಜಾಯಿಂಟ್ ಸೆಲೆಕ್ಟ್ ಸಮಿತಿಯವರು ಸಹ ತಮ್ಮ ವರದಿಯಲ್ಲಿ ಅವರು ಈ ವಿಚಾರದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅವರು ಹೇಳಿರುವುದು ಹೀಗಿದೆ:— On page Three of the Joint Select Committee Report it is said :

"Moreover, the holders of village offices and their ancestors have rendered yeoman service to the state .." ಇದು ನಿಜವಾಗಿಯೂ ಬಹಳ ಸೂಕ್ತವಾದಂಥಾ ಅಭಿಪ್ರಾಯ. ಆದರೆ ಕೆಲವರು ಈ ಗುಂಪಿನಲ್ಲಿ ಕೆಟ್ಟವರಿರಬಹುದು. ಅದಕ್ಕಾಗಿಯೇ ಎಲ್ಲರನ್ನೂ ಒಟ್ಟಿಗೆ ಸೇರಿಸಿ ಸಾರ್ವತ್ರಿಕವಾಗಿ ಒಂದೇ ಎಂತ ತೀರ್ಮಾನ ಮಾಡುವುದಕ್ಕಾಗುವುದಕ್ಕಾಗುವುದಿಲ್ಲ. ಈಗ ಮುಖ್ಯವಾಗಿ ನಮ್ಮ ಮುಂದೆ ತೀರ್ಮಾನವಾಗಿ ಬಂದಿರುವ ವಿಚಾರಗಳೇಂದರೆ ಇವರಿಗೆ ಸೂಕ್ತ ಪರಿಹಾರ ಕೊಡುವುದೂ ಮತ್ತು ಇವರೆಲ್ಲರಿಗೂ ಜಮೀನನ್ನು ಕೊಡುವೇಕೆಂಬ ಎರಡು ಪ್ರಶ್ನೆಗಳು ನಮ್ಮ ಮುಂದಿವೆ. ಈ ವಿಚಾರದಲ್ಲಿ ಸರ್ಕಾರದವರು ಅವರಿಗೆ ಸೂಕ್ತ ಪರಿಹಾರ ನೀಡಿ ಅವರ ಮಗ್ಗುಲಿಗೆ ನೋಡಾಗದ ರೀತಿಯಲ್ಲಿ ಈ ಪ್ರಶ್ನೆಯನ್ನು ತೀರ್ಮಾನ ಮಾಡಬೇಕೆಂದು ಹೇಳಿ ಇನ್ನು ಮಾತನಾಡುವ ನನಗೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಅಧ್ಯಕ್ಷರೇ, ಜಾಯಿಂಟ್ ಸೆಲೆಕ್ಟ್ ಸಮಿತಿಯಿಂದ ಬರುವಷ್ಟಕ್ಕೆ ಹಾಗೂ ಈಗ ನನ್ನ ಮುಂದಿರತಕ್ಕ ಈ ವರದಿಯ ಮೇರೆ ಮಾನ್ಯ ಸದಸ್ಯರೆಲ್ಲರು ಈಗಾಗಲೆ ತಮ್ಮತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ವಿಚಾರದಲ್ಲಿ ನಾನಾದರೂ ಹೇಳುತ್ತೇನೆ. ಈ ಗ್ರಾಮಾಧಿಕಾರಿಗಳೇನಿದ್ದಾರೆ ಅವರು ಈಗ ಅವರಿಗಿರತಕ್ಕ ಸಾಗುವಳಿಯಲ್ಲೇ ಅವರನ್ನೂ ಅಂಟಿಕೊಂಡಿರಬೇಕು ಎನ್ನುವಷ್ಟಕ್ಕೆ ಅಭಿಪ್ರಾಯ ಅವರಿಗೂ ಸಹ ಇಲ್ಲ. ಅವರು ಈಗಾಗಲೇ ಬಹಳ ದಿವಸಗಳಿಂದಲು ಸರ್ಕಾರದವರಿಗೆ "ನಮಗೆ ಈ ನಿಮ್ಮ ಅಧಿಕಾರವೇಡಿ. ಇವನ್ನು ನೀವೇ ತೆಗೆದುಕೊಂಡು ನಮ್ಮನ್ನು ಈ ವೃತ್ತಿಯಿಂದ ನಿವೃತ್ತಿ ಮಾಡಿ" ಎಂದು ಕೇಳಿಕೊಳ್ಳುತ್ತಿದ್ದಾರೆ. ಆದರೆ ಅವರು ಹಾಗೆ ಕೇಳತಕ್ಕ ಕಾಲದಲ್ಲಿ ಅವರು ಅವರ ವೃತ್ತಿಯಿಂದ ನಿವೃತ್ತಿ ಮಾಡಿಸಕ್ಕ ಕಾಲದಲ್ಲಿ ಒಂದು ಯೋಗ್ಯವಾದ ಕಾಂಪೆಕ್ಷೇಷನ್ನನ್ನು ಮಾತ್ರ ಕೊಡಿ ಎಂದು ಹೇಳುತ್ತಿದ್ದಾರೆ. ಆದರೆ ಈ ಪ್ರಕೃತ ಸಂದರ್ಭದಲ್ಲಿ ನಾನಾದರೂ ಈ ಗ್ರಾಮಾಧಿಕಾರಿಗಳ

(ಶ್ರೀ ಪೈ. ವೀರಪ್ಪ)

ವಿಚಾರವಲ್ಲಿ ಒಂಡೆಂದು ನಮಿಷಾತುಗಳನ್ನಾಡಿದ್ದಿರ ನಾನು ನನ್ನ ಕರ್ತವ್ಯದಲ್ಲಿ ಒಂದು ಲೋಪ ಮಾಡಿದಂತಾದೀತು. ಈ ದಿವಸ ಇರತಕ್ಕ ನಮ್ಮ ಸಮಾಜ ಒಂದಾನೊಂದು ಕಾಲದಲ್ಲಿ ಇದು ಏನೊಂದು ಅವ್ಯವಸ್ಥಿತಿಯಲ್ಲಿತ್ತೊ ಅಂಥ ಕಾಲದಿಂದ ಈ ಗ್ರಾಮಾಧಿಕಾರಿಗಳು ನಮ್ಮ ಸಮಾಜಕ್ಕೆ ಬಹಳ ಒಳ್ಳೆಯ ಸೇವೆಯನ್ನು ನಾನಾ ರೂಪದಲ್ಲಿ ಸಲ್ಲಿಸಿಕೊಂಡು ಬಂದಿದ್ದಾರೆ. ಅದರಲ್ಲೂ ರೆವಿನ್ಯೂ, ಪೋಲೀಸ್ ಮತ್ತು ಸಿವಿಲ್ ವ್ಯವಹಾರಗಳಲ್ಲಿ ಈ ಗ್ರಾಮಾಧಿಕಾರಿಗಳು ಬಹಳ ಅಮೋಘವಾದ ಹಾಗೂ ಉತ್ಕೃಷ್ಟವಾದ ಸೇವೆಯನ್ನು ಸಲ್ಲಿಸಿಕೊಂಡು ಬಂದಿದ್ದಾರೆ. ನಾನು ಈ ಹಿಂದೆ ಈ ಮಸೂದೆಯನ್ನು ಈ ಸಭೆಯ ಮುಂದೆ ತಂದಿದ್ದಾಗಲೇ ಈ ವಿಚಾರವಲ್ಲಿ ವಿವರವಾಗಿ ಮಾತನಾಡಬೇಕೆಂದಿದ್ದೆ. ಆದರೆ ಆಗ ನನಗೆ ಮಾತನಾಡಲು ಕಾಲಾವಕಾಶವಿಲ್ಲದೆ ಹೋಯಿತು ರಿಂದ ಆಗ್ಗೆ ನಾನು ಈ ವಿಚಾರಗಳನ್ನೆಲ್ಲ ಪ್ರಸ್ತಾಪಿಸಲು ಅವಕಾಶವಾಗಲಿಲ್ಲ. ಆದರೆ ಈ ಹಿಂದೆ ಈ ಸಂಬಂಧವಾದ ಬಿಲ್ಲನ್ನು ಸಭೆಯ ಮುಂದೆ ತಂದಿಸುವ ಕಾಲದಲ್ಲಿ ಇವಕ್ಕೆ ಸಂಬಂಧಪಟ್ಟ ಮಂತ್ರಿಗಳು ಈ ಗ್ರಾಮಾಧಿಕಾರಿಗಳ ಸ್ಥಾನಮಾನಗಳೇನು, ಏಕೆ ಇವರನ್ನು ನಿವೃತ್ತಿ ಮಾಡಬೇಕು ಎನ್ನತಕ್ಕ ವಿಚಾರಗಳನ್ನು ಸಭೆಯ ಮುಂದೆ ವಿವರತಕ್ಕ ಕಾಲದಲ್ಲಿ ಇದೊಂದು ಪ್ರೂದಲ್ ಎನ್ನುಂ ಇದ್ದಹಾಗಿದೆ ಅಂದರೆ ಇದೊಂದು ಪಾಳೇಪಟ್ಟಿನ ಅವಶೇಷವಿದ್ದ ಹಾಗಿದೆ ಎಂಬುದಾಗಿ ಹೇಳಿದ್ದಾರೆ. ಆದರೆ ತಿದಿವ ಈಗೆ ಮಂತ್ರಿಗಳು ಹೇಳಿರುವುದು ನಮ್ಮ ಸಮಾಜ ನೀತಿಗೂ, ಸಮಾಜ ಸುಧಾರಣೆ ತತ್ವಕ್ಕೂ ಇದು ತೀರಾ ವಿರುದ್ಧವಾಗಿದೆಯೆಂಬ ಅಂಶವನ್ನು ನಾನೀ ಬಹಳ ನಂಕಟದಿಂದ ಹೇಳಬೇಕಾಗಿದೆ. ನಮ್ಮ ಸಮಾಜಕ್ಕೆ ಈಗಾಗಲೇ ನನ್ನ ಅನೇಕ ಮಿತ್ರರು ಹೇಳಿರುವಂತೆ, ಈ ತೋಟಿ, ತಳವಾರಿ, ನೀರುಗಂಟಿ, ಕುರ್ಕರ್ಣಿ, ಪಟೇಲ-ಈ ಒನ್ಲರೂ ನಿಲ್ಲಿ ಸಿರತಕ್ಕಂಥ ಅಪಾರ ಸೇವೆಯೇನಿದೆ ಅದನ್ನು ನಾವುಗಳಾರೂ ಮರೆಯುವಹಾಗಿಲ್ಲ. ಈಗಿರತಕ್ಕ ನರ್ಕಾರವನ್ನು ಸಹ ಮತ್ತು ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಲೇಕೆಂದಿದ್ದ ಕಾಲದಲ್ಲಿ ಇವರು ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. ಆದರೆ ಈ ದಿವಸ ಗ್ರಾಮಲಿಯಲ್ಲಿ ಅನೇಕ ಮಂದಿ ಗ್ರಾಮಾಧಿಕಾರಿಗಳು ಕೂಳಿತಿದ್ದಾರೆ. ಅವರನ್ನು ದೃಷ್ಟಿಯಲ್ಲಟ್ಟುಕೊಂಡು ಈಗತಾನೆ ಮಾತನಾಡಿದವರಲ್ಲಿ ಶ್ರೀಮತ್ ಲವಪ್ಪನವರು ಹೀಗೆ ನಾನೀಗ ಮಾತನಾಡುತ್ತಿಲ್ಲ. ನಾನೀಗ ಪ್ರಸ್ತಾಪ ಮಾಡುತ್ತಿರುವುದೆಲ್ಲ ಕೇವಲ ನಮ್ಮ ಆ ಮೂಲಭೂತವಾಗಿ ಬಂದಿರತಕ್ಕ ತತ್ವಗಳನ್ನೆಲ್ಲ ಅವುಗಳನ್ನು ಪ್ರಸ್ತಾಪಿಸುತ್ತಿದ್ದೇನೆ. ಈ ಮೂಲಭೂತ ತತ್ವಗಳ ಹಿನ್ನೆಲೆಯಿಂದ ಈಗ ಈ ಬಿಲ್ಲಿನಲ್ಲಿ ಹೇಳಿರತಕ್ಕ ಅಂಶಗಳನ್ನು ಪರಿಶೀಲಿಸಬೇಕಾದರೆ ಈ ದಿವಸ ಬಿಲ್ಲಿನಲ್ಲಿ ಅಡಕವಾಡಿರುವುದೆಲ್ಲ ತುಂಬಾ ನಿರಾಶಾದಾಯಕವಾಗಿರುತ್ತೆಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ. ಹಿಂದೇ ಮಾತನಲ್ಲಿ ಹೇಳುವುದಾದರೆ ಇದು ಯಾವ ಒಂದು ದೂರದೃಷ್ಟಿಯೂ ಇಲ್ಲದ ವಿಷಯ ಶೂನ್ಯವಾದಂಥಾ ಬಿಲ್ ಎಂಥ ಹೇಳಲೇಕಾಗಿದೆ. ಈಗಾಗಲೇ ದೇಶದಲ್ಲಿ ನಿರುದ್ಯೋಗ ಸಮಸ್ಯೆ ತುಂಬಿ ತುಳುಕಾಡುತ್ತಿದೆ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕೆಂಬ ಆಲೋಚನೆ ಇರುವ ಕಾಲದಲ್ಲಿ ಮತ್ತೆ ಒಂದು ಲಕ್ಷ ಜನರನ್ನು ನಿರುದ್ಯೋಗಕ್ಕೆ ತುತ್ತಮಾಡುವುದು ಯಾವ ವಿಚಾರಕ್ಕೆ ? ಯಾವ ವಿತರಣೆ ಇದು ? ಈ ದಿವಸ ಈ ಅಪಾರ ಜನರನ್ನು ಉದ್ಯೋಗದಿಂದ ನಿವೃತ್ತಿ ಮಾಡಿದ ಮೇಲೆ ಮುಂದೆ ಇವರ ಗತಿ ಏನು ಎಂಬುದಕ್ಕೆ ಸರ್ಕಾರದವರ ಗಮನ ಕೊಟ್ಟಹಾಗೆ ಕಾಣುತ್ತಿಲ್ಲ. ಈಗ ನಾವು ಈ ಗ್ರಾಮಾಧಿಕಾರಿಗಳನ್ನು ಅವರ ಹುದ್ದೆಯಿಂದ ತಪ್ಪುಮಾಡಿದ ಮೇಲೆ ನಿರುದ್ಯೋಗಿಗಳಾಗುವ ಮಂಥಾ ಜನರ ಪೈಕಿ ಶಾನುಭೋಗರುಗಳು ಸುಮಾರು 1,737 ಇರುತ್ತೆ, ಪಟೇಲರ ಸಂಖ್ಯೆ 30,633 : ತೋಟಿ ತಳವಾರಿಗಳ ಸಂಖ್ಯೆ 36,900 ಮತ್ತು ನೀರುಗಂಟಿಗಳ ಸಂಖ್ಯೆ 7,905 ಹೀಗೆ ಒಟ್ಟು ಸುಮಾರು ಒಂದು ಲಕ್ಷ ಜನರು ಹತ್ತಿರ ನಿರುದ್ಯೋಗಿಗಳ ವರ್ಗಕ್ಕೆ ಸೇರುತ್ತಾರೆ. ಇವುಂದ ದೇಶದಲ್ಲಿರತಕ್ಕ ನಿರುದ್ಯೋಗಿಗಳ ಸಮಸ್ಯೆ ಮಾತ್ರವು ಜ ಲಘುವಾಗುತ್ತದ. ಆದರೆ ನಾವೀಗ ಇಷ್ಟು ಜನರನ್ನು ಈ ಉದ್ಯೋಗಗಳಲ್ಲೇ ಮುಂದುವರಿಸಿಕೊಂಡು ಬಿನ್ನಿ ಎಂತ ಈಗ

ಹೇಳುತ್ತಿಲ್ಲ. ನಾನೀಗ ಸರ್ಕಾರದವರ ಗಮನಕ್ಕೆ ತರಬೇಕೆಂದಿರುವ ಮುಖ್ಯಾಂಶವೇನೆಂದರೆ ಈ ಗ್ರಾಮಾಧಿಕಾರಿಗಳಿಂದ ಈ ಹಿಂದೆ ನಮ್ಮ ದೇಶಕ್ಕೆ ಸಮಾಜಕ್ಕೆ ಉನ್ನತವಾದ ಸೇವೆ ದೊರಕಿದೆ ಇನ್ನು ಮುಂದೆಯೂ ಆ ಸೇವೆ ಅವರಿಂದ ನಮಗೆ ದೊರೆಯುವುದಕ್ಕಾದ ಅಗತ್ಯವಿದೆ. ಅದುದರಿಂದ ಈ ದಿವಸ ಅವರನ್ನು ಕೆಲಸದಿಂದ ನಿವೃತ್ತಿ ಮಾಡಿ ಅವರನ್ನು ಕಳುಹಿಸುವ ಕಾಲದಲ್ಲಿ ಅವರಿಗೊಂದು ಗೌರವಯುತವಾದ ರೀತಿಯಲ್ಲಿ ಮರ್ಯಾದೆಯನ್ನು ಕೊಟ್ಟು ಕಳುಹಿಸಬೇಕಾದ್ದು ಧರ್ಮ ಎಂಬುದನ್ನು ತಿಳಿಸುತ್ತಿದ್ದೇನೆ. ಈ ದಿವಸ ನಿವೃತ್ತಿ ಹೊಂದತಕ್ಕ ಜನಗಳಿಗೆಲ್ಲ ಸರ್ಕಾರದವರು ಮುಂದೆ ಅವರು ಒಂದು ಗೌರವ ರೀತಿಯಲ್ಲಿ ಜೀವನ ನಡೆಸಿಕೊಂಡು ಹೋಗುವುದಕ್ಕೆ ಏನಾದರೊಂದು ಉದ್ಯೋಗ ಕಲ್ಪಿಸತಕ್ಕ ಯೋಜನೆಯನ್ನು ತಯಾರಿಸಿ ನಮ್ಮ ಮುಂದಿಟ್ಟಿದ್ದಾರಯೇ–ಎಂದರೆ ಅದಿಲ್ಲ. ಆದರೆ ಈ ವಿಚಾರದಲ್ಲಿ ನನ್ನ ಒಂದು ಸಲಹೆ ಏನೆಂದರೆ ಈ ದಿವಸ ದೇಶದಲ್ಲಿ ಅನೇಕ ಕಡೆ ಅನೇಕ ದೊಡ್ಡ ದೊಡ್ಡ ಯೋಜನೆಗಳು ನಡೆಯುತ್ತಿವೆ. ಅಲ್ಲೆಲ್ಲಾ ನಾನಾ ದರ್ಜೆಯ ಕೆಲಸಗಳು ಖಾಲಿ ಇರುತ್ತವೆ. ಅಂಥಾ ಕೆಲಸಗಳಲ್ಲಿ ಈಗ ನಿರುದ್ಯೋಗಕ್ಕೆ ತುತ್ತಾಗುವ ಜನರಿಗೆ ಒಂದು ನಿವೃತ್ತಿಯನ್ನು ಕಲ್ಪಿಸಿ ಕೊಟ್ಟು ತನ್ಮೂಲಕ ಈ ಜನರಿಂದ ದೇಶಕ್ಕೆ ಒಂದು ಸೇವೆ ಲಭಿಸುವಂಥಾ ಅವಕಾಶ ಕಲ್ಪಿಸಬಹುದು. ಇದರಿಂದ ನಮ್ಮ ನಿರುದ್ಯೋಗ ಸಮಸ್ಯೆಯನ್ನೂ ಕೂಡ ಸಾಧ್ಯವಾದಷ್ಟು ಬಹಳ ಮಟ್ಟಿಗೆ ಬಿಡಿಸಿದ ಹಾಗಾಗುತ್ತದೆ. ಇವರಿಗೆಲ್ಲ ಆ ರೀತಿಯ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಮೂಕಪ್ಪ.—ಇವರೆಲ್ಲರೂ ಈ ಒಂದು ಕೆಲಸದ ಏನಾ ಬೇರೆ ಇನ್ನಾವ ವೃತ್ತಿಯನ್ನೂ ಅವಲಂಬಿಸಿರಲಿಲ್ಲ. ಇವರೆಲ್ಲರೂ ನಿರುದ್ಯೋಗಿಗಳೇ ಎಂತ ತಾವೇಗ ಹೇಳುತ್ತಿದ್ದೀರಾ ?

ಶ್ರೀ ವೈ. ವೀರಪ್ಪ.—ಈ ಗ್ರಾಮ ನಾಕರ ಒಂದು ಪದ್ಧತಿಯೇನಿತ್ತು, ಇದು ಬಹಳ ಪಾರಂಪರ್ಯವಾಗಿ ಬಂದದ್ದು. ಇದರಲ್ಲಿ ಅವರಿಗೆ ಸಂಬಳವಾದಿನೆಯೇನೂ ಇಲ್ಲದೆ ಇದ್ದಾಗ್ಯೂ ಕೇವಲ ಒಂದು ಗೌರವಕ್ಕಾಗಿ ತಮಗೆ ಬೇರೆ ಕಡೆಗಳಲ್ಲಿ ಸಂಪಾದನೆ ಬರುವಂತಿದ್ದರೂ ಆ ಕೆಲಸಗಳನ್ನೆಲ್ಲಾ ಬಿಟ್ಟು ಇವರು ತಮ್ಮ ತಮ್ಮ ಗ್ರಾಮಗಳಲ್ಲೇ ಈ ಕೆಲಸಗಳಿಗೆ ಅಂಟಿಕೊಂಡು ಬಂದಿವ್ವಾರೆ. ಆದ್ದರಿಂದ ಇವರಿಗೆ ಈಗ ಮತ್ತೊಂದು ಕಡೆಯಲ್ಲಾದರೂ ಒಂದು ಸ್ವಾತಂತ್ರ್ಯವನ್ನ ಕೊಡಲು ವ್ಯವಸ್ಥೆ ಮಾಡಬೇಕಾದ್ದು ಯೋಗ್ಯವಾದುದೆಂಬುದನ್ನು ತಿಳಿಸುತ್ತಿದ್ದೇನೆ. ಹಿಂದಿನಿಂದಲೂ ಇವರೆಲ್ಲಾ ಇದ್ದ ಊರಿನಲ್ಲೇ ಇದ್ದುಕೊಂಡು ಸಮಾಜ ಸೇವೆ ಮಾಡಿಕೊಂಡು ಬಂದಿದ್ದಾರೆ. ಆವರೆ ಈ ಹಿಂದೆ ನಮ್ಮಲ್ಲಿನ್ನ ಆ ಒಂದು ಅನ್ಯೋನ್ಯತೆ ಈಗ ಕಾರಾನು ಗುಣವಾಗಿ ಬದಲಾವಣೆ ಹೊಂದಿದೆ. ಆದ್ದರಿಂದ ಇವರಿಗೆ ಮುಂದೆ ಏನಾದರೂ ಒಂದು ಉದ್ಯೋಗ ಕಲ್ಪಿಸಿಕೊಟ್ಟು ಆ ಮೂಲಕ ಈ ಜನರ ಸೇವೆ ನಮ್ಮ ಸಮಾಜ, ಸರ್ಕಾರ ಇವುಗಳಿಗೆಲ್ಲ ಸಲ್ಲುವಂತೆ ಮಾಡಬೇಕಾದ್ದು ಅಗತ್ಯವೆಂದು ನಾನು ಹೇಳುತ್ತೇನೆ. ಆದರೆ ಈಗ ಇವರಿಗೆ ಆ ಕರು ಪಟೇಲ್-ಮುನಸು ಪಟೇಲ್ ಜಮಾನುಗಳನ್ನೇನೂ ಕೊಡಬೇಕೆಂದು ಹೇಳಲಾಗಿದೆ. ಆ ಜಮಾನುಗಳ ಆಕ್ಟ್ ಪೇಸಿ ರೈಟನ್ನು ಇವರಿಗೆ ಆ ಒಂದು ನಾಮಿನಲ್ ಹಣ ತೆಗೆದುಕೊಂಡು ಮಾಡಿಕೊಡು ಮಾಡಬೇಕೆಂದು ಏನು ಹೇಳಿದ್ದಾರೋ ಅದು ನ್ಯಾಯವಾದ್ದಲ್ಲ, ಅದರಿಂದ ಸರ್ಕಾರಕ್ಕೆ ಬರತಕ್ಕ ಹಣವಾದರೂ ಎಷ್ಟು ಎಂಬುದನ್ನು ಸರ್ಕಾರದವರಿಗೆ ನಮಗೆ ಎಲ್ಲಿಯೂ ತಿಳಿಸಿಲ್ಲ. ಆದರೆ ಈ ಮೂಲಕ ಸರ್ಕಾರಕ್ಕೇನು ಬರುವಷ್ಟು ಬರುತ್ತೆ ಅದನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳೋ ಮಟ್ಟದಲ್ಲಿ ಇರುವಂದೆಂದು ಕಾಣುತ್ತೆ ಈ ಜಮಾನುಗಳನ್ನೆಲ್ಲ ಉಚಿತವಾಗಿ ಇವರಿಗೆ ಖಾಯಂ ಮಾಡಿ ಇವರು ಒಂದು ಉತ್ತಮ ರೀತಿಯಲ್ಲಿ ಜೀವನ ಮಾಡಲು ವಿಧಾನವನ್ನು ಮಾಡಬೇಕಾದ್ದು ಯೋಗ್ಯ. ಈ ವಿಷಯ ರಾಜಕೀಯದಲ್ಲಿ ನೂರಾರಿಗೆಂದು ಸರ್ಕಾರ ಅನೇಕ ಸಾಲಭ್ಯಗಳನ್ನು ಕೊಟ್ಟಿಲ್ಲವೇ ? ಹಾಗೇ ಇವರಿಗೂ ಒಂದು ವ್ಯವಸ್ಥೆಯನ್ನೇಕೆ ಮಾಡಬಾರದು ? ಇವರೂ ಸಹ ಅದಿಯುಂಡರೂ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸಿಕೊಂಡು ಬಂದಿದ್ದಾರೆ. ಈ

(ಶ್ರೀ ವೆ೯. ವೀರಪ್ಪ)

ದೃಷ್ಟಿಯಿಂದ ಇವುಗೂ ಸಹ ಸರ್ಕಾರದವರು ನೂತ್ತ ರೀತಿಯಲ್ಲಿ ಜಮೀನು ಮತ್ತು ಪರಿಹಾರ ದ್ರವ್ಯವನ್ನು ಕೊಟ್ಟು ಇವರಿಗೆ ಒಂದು ಅನುಕೂಲ ಕಲ್ಪಿಸಿಕೊಡಬೇಕಾದ್ದು ನೂಕ್ತವೆಂದು ನಾನು ಹೇಳುತ್ತೇನೆ.

12-00 Noon

ಶ್ರೀ ಎಚ್. ಎಸ್. ರುದ್ರಪ್ಪ.—ಅದಕ್ಕೆ ಪ್ರೊವಿಜನ್ ಮಾಡಿದ್ದಾರೆ. ಜಮೀನು ಇಲ್ಲದವರಿಗೆ ಹತ್ತು ಪರ್ಸೆಂಟ್ ಅಲಾಟ್‌ಮೆಂಟಿನ್ನಲ್ಲಿ ರಿಜರ್ವ್ ಮಾಡಿದ್ದಾರೆ.

ಶ್ರೀ ವೆ೯. ವೀರಪ್ಪ.—ಜಮೀನು ಇಲ್ಲದವರೆಲ್ಲರಿಗೂ ಕೊಡಬೇಕು. ಸಾಂಕೇತಿಕವಾಗಿ ಸ್ವಲ್ಪ ಕೊಟ್ಟರೆ ಸಾಲದು. ಅವರು ಸುಖವಾಗಿ ಜೀವನ ನಡೆಸಲು ಸಾಕಾಗುವಷ್ಟು ಕೊಡಬೇಕು. ಗ್ರಾಮಾಧಿಕಾರಿಗಳು ಹೀಗೆ ಮೈಸೂರು ಪ್ರದೇಶದಲ್ಲಿ ಸಮಾಜವನ್ನೂ exploit ಮಾಡಿದ್ದಾರೆ ಎಂಬ ಭಾವನೆ ಇಟ್ಟುಕೊಳ್ಳಬಾರದು. ಸಮಾಜದಲ್ಲಿ ನಾನಾ ಕ್ಷೇತ್ರಗಳಲ್ಲಿ ಲೋಪ ದೋಷಗಳು ಇದ್ದೇ ಇವೆ. ಇದನ್ನು ಒಂದು ದೊಡ್ಡ ಪೆಡಂಭೂತ ಕಾರಣ ಎಂದು ತಿಳಿದು ಕೊಳ್ಳಬಾರದು. ಉದಾರ ಮನೋಭಾವನೆಯಿಂದ ಎಲ್ಲ ಸಾಲವನ್ನು ಕಲ್ಪಿಸಿಕೊಡಬೇಕು. ನಿಜವಾಗಿಯೂ ಗ್ರಾಮಾಧಿಕಾರಿಗಳು ಸಮಾಜದ ಹಿತದ ದೃಷ್ಟಿಯಿಂದ ಒಳ್ಳೇ ಕೆಲಸ ಮಾಡಿದ್ದಾರೆ ಎಂದು ತಿಳಿದುಕೊಳ್ಳಬೇಕು. ಆರ್ಟಿಕಲ್ 16 ಮತ್ತು 14ರ ಪ್ರಕಾರ ಅನುಮತಿ ಹುದ್ದೆಗಳಾರು ಆಗಾಗ ದಿಲ್ಲಿ ಎಂದು ಸುಪ್ರೀಂ ಕೋರ್ಟಿನವರು ನಿರ್ಣಯ ಮಾಡಿದ್ದಾರೆ. ಆದ್ದರಿಂದ ಪರಿಹಾರ ಕೊಡುವುದಕ್ಕಾಗುವುದಿಲ್ಲ ಎಂಬ ಅಭಿಪ್ರಾಯ ಬಂದಿದೆ 1950ನೇ ಇಸವಿಯ ಜನವರಿ 26ನೇ ತಾರೀಖಿನ ದಿನ ರಾಷ್ಟ್ರಾಂಗ ಅನುಷ್ಠಾನಕ್ಕೆ ಬಂದಮೇಲೆ ಏನು ಮಾಡುತ್ತಿದ್ದೀರಿ? ಜೋಡಿ ಗ್ರಾಮ ತೆಗೆದುಕೊಂಡ ಮೇಲೆ ಜೋಡಿದಾರರಿಗೆ ಪರಿಹಾರ ಕೊಟ್ಟಿಲ್ಲವೇ? ಸುಪ್ರೀಮ್ ಕೋರ್ಟ್ ನಿರ್ಣಯ ಬರುವುದಕ್ಕೆ ಮುಂಚೆ ಪರಿಹಾರ ಕೊಡುತ್ತಿದ್ದಿಲ್ಲವೇ? ಅವರಿಂದ ಸೇವೆ ತೆಗೆದುಕೊಂಡು, ಮುಂದಿನ ಸಮಾಜಕ್ಕೆ ಸೇವೆ ಮಾಡುವುದಕ್ಕೆ ಅವರ ಮಕ್ಕಳು ಮರಿಗಳಿಗೆ

[Mr. SPEAKER in the Chair]

ಒಳ್ಳೇ ವ್ಯವಸ್ಥೆ ಮಾಡಿ, ಸಂತೋಷದಿಂದ ಅವರನ್ನು ಬೀಳ್ಕೊಡುವುದು ನ್ಯಾಯವಾದುದು ಎಂದು ಹೇಳುತ್ತೇನೆ. ಹೊಸಲು ಮನೂಡೆಯಲ್ಲಿ ನಮೂಬಿಸಿದಂತೆ ಪರಿಹಾರ ಕೊಡಬೇಕು. ಅವರ ಹೊಟ್ಟೆ ಪಾಡಿಗೆ ಸಾಕಾಗುವಷ್ಟು ಪರಿಹಾರ ಕೊಡಬೇಕಾದ್ದು ಅವಶ್ಯಕವಾಗಿದೆ. ಒಟ್ಟಿನಲ್ಲಿ ಪೋಷಣೆಗೆ 30 ರಷ್ಟು ಜಾಸ್ತಿ ಪರಿಹಾರ ಕೊಡಬೇಕೆಂದು ನಾನು ಹೇಳುತ್ತೇನೆ. ಮುಖ್ಯವಾಗಿ ಗ್ರಾಮಾಧಿಕಾರಿಗಳು ಮಾಡಿರುವ ಸೇವೆಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಬಾಣನೆಯಲ್ಲಿ ಕೊಡುವುದುದ್ದು ಇಲ್ಲ ಎಂದು ಹೇಳುವ ವಾದ ಸರಿಯಿಲ್ಲ. ಮೊದಲಿಂದಲೂ ಅನುಚಿತವಾಗಿ ಸೇವೆ ಮಾಡುತ್ತಾ ಬಂದಿರತಕ್ಕ ಗ್ರಾಮಾಧಿಕಾರಿಗಳ ಬಗ್ಗೆ ಸುಪ್ರೀಮ್ ಕೋರ್ಟಿನ ನಿರ್ಣಯ ಬಂದಮೇಲೆ ಅದನ್ನು ಅನ್ವಯಿಸುವುದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಆದ್ದರಿಂದ ಈ ಅಭಿಪ್ರಾಯವನ್ನು ಬದಲಾಯಿಸಬೇಕು. ಕೇವಲ ಒಂದು ಸಾವಿರ ರೂಪಾಯಿ ಪರಿಹಾರ ಕೊಡುವುದು ಯೋಗ್ಯವಾಗಲಾರದು. ಈಗಲಾದರೂ ಉದಾರ ಮನೋಭಾವನೆಯಿಂದ ಪರಿಹಾರ ಹೆಚ್ಚಿಗೆ ಕೊಡಬೇಕೆಂದು ಕಾಂಗ್ರೆಸ್ ಪಕ್ಷದವರು ಹೇಳಿದರೆ ಅದಕ್ಕೆ ಯಾರೂ ವಿರೋಧ ಮಾಡುವುದಿಲ್ಲ. ರಾಜ್ಯಾಂಗವಾಗಲಿ ಸುಪ್ರೀಂ ಕೋರ್ಟು ಆಗಲಿ ಅದಕ್ಕೆ ಅಡ್ಡ ಬರುವುದಿಲ್ಲ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಗ್ರಾಮಾಧಿಕಾರಿಗಳಿಗೆ ಪರಿಹಾರ ಕೊಡುವುದಕ್ಕೆ ಯಾರೂ ವಿರೋಧಿಸಲಾರರು. ಅವರನ್ನು ಮನೆಗೆ ಕಳುಹಿಸಿಕೊಡುವಾಗ ಅವರ ಸೇವೆಯನ್ನು ಸ್ಮರಿಸಿಕೊಂಡು ಸಂತೋಷವಾಗಿ ಹೋಗುವ ಹಾಗೆ 30 ರಷ್ಟು ಪರಿಹಾರವನ್ನು ಕೊಡಬೇಕು ಎಂದು ನಾನು

ಹೊತ್ತುತ್ತೇನೆ. ಅವರು ಮಾಡಿರುವ ಸೇವೆಯನ್ನು ಗಣನೆಗೆ ತೆಗೆದುಕೊಂಡರೆ ಇಷ್ಟು ಪರಿಹಾರ ಕೊಡುವುದಕ್ಕೆ ಅವರು ಅರ್ಹರಾಗಿದ್ದಾರೆ. ಪೋಟಿಗಿ ಅಧಾರದ ಮೇರೆ ಲೆಕ್ಕಾಚಾರ ಹಾಕಿ 30ರಷ್ಟು ಪರಿಹಾರ ಕೊಡಬೇಕು. ಯಾಕೆಂದರೆ ಈ ಪರಿಹಾರ ಪ್ರಶ್ನೆ ಅವರಿಗೆ ಒಹು ಮುಖ್ಯ ವಾದುದು. ಪೋಟಿಗಿ ಆ ರೀತಿಯಾಗಿಟ್ಟುಕೊಂಡು ಪರಿಹಾರ ಕೊಟ್ಟು ಗ್ರಾಮಾಧಿಕಾರಿಗಳನ್ನು ಕಳಿಸಿಕೊಡಬೇಕು. ಒಂದು ತಿದ್ದುಪಡಿಯನ್ನು ತಂದು ಪರಿಹಾರ ಕೊಡಬೇಕೆಂದು ಬದಲಾವಣೆ ಮಾಡಬೇಕಾದುದು ಸೂಕ್ತ. ಈ ರೀತಿ ಮಾಡಲು ಸರಕಾರ ವನ್ನು ಬದಲಾವಣೆ ಮಾಡಿಕೊಳ್ಳಬೇಕು.

ಶ್ರೀ ಕಡಿದಾಳ್ ಮಂಜಪ್ಪ.—30ರಷ್ಟು ಪರಿಹಾರ ಕೊಡುವುದಾದರೆ ಸುಮಾರು 25–30 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಹೇಳುತ್ತೇನೆ.

ಶ್ರೀ ಪ್ಯೆ. ವೀರಪ್ಪ.—ಗ್ರಾಮಾಧಿಕಾರಿಗಳ ಬದಲು ಬೇರೆ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವಾಗ ಖರ್ಚು ಎಷ್ಟು ಬೇಳುತ್ತದೆ ಎನ್ನುವುದನ್ನು ತಿಳಿಸಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನಾವೂ, ನೀವೂ ಸೇರಿ ಅನುಮತಿಕ ಹುದ್ದೆಗಳನ್ನು ರದ್ದು ಮಾಡಬೇಕು ಎಂಬ ತತ್ವವನ್ನು ಒಪ್ಪಿಕೊಂಡು ಈ ಮಸೂದೆಯನ್ನು ಮಾಡಿರುವುದು.

ಶ್ರೀ ಪ್ಯೆ. ವೀರಪ್ಪ.—ಗ್ರಾಮಾಧಿಕಾರಿಗಳೇ ಒಪ್ಪಿಕೊಂಡಿದ್ದಾರೆ ಮತ್ತು ಆ ರೀತಿ ನಿರ್ಣಯ ವನ್ನು ಮಾಡಿ ಕಳಿಸಿದ್ದಾರೆ. ಅವರಿಗೆ ಪೋಟಿಗೆಯ ಮುಖತ್ತರವನ್ನು ಕೊಟ್ಟರೆ ಸುಮಾರು 30 ಕೋಟಿ ರೂಪಾಯಿ ಬೇಕಾಗುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದರು. ಮೂರನೆಯ ಯೋಜನೆಯಲ್ಲಿ 10,339 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ನಮ್ಮ ರಾಜ್ಯದಲ್ಲಿ 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಜನರ ಮೇಲೆ ಅನೇಕ ರೀತಿಯಲ್ಲಿ ತೆರಿಗೆಯ ಹೊರೆಯನ್ನು ಹೇರುತ್ತಿದ್ದೀರಿ. ನಿನ್ನೆ ತಾನೇ ಬೆಟರ್‌ಮೆಂಟ್ ಲೇವಿಗೆ ಸಂಬಂಧಪಟ್ಟ ತಿದ್ದುಪಡಿ ಮಸೂದೆ ಪಾಸಾಯಿತು. ಭೂಗಂದಾಯದ ಮೇಲೆ ಸರ್‌ಚಾರ್ಜ್ ವಿಧಿಸುವ ಬಿಲ್ ಇದೆ. ನಮಾಜಕ್ಕೆ ಸರ್ವತೋಮುಖವಾಗಿ ಅನಾದಿ ಕಾಲದಿಂದ ಸೇವೆಮಾಡಿರುವ ಗ್ರಾಮಾಧಿಕಾರಿ ಗಳ ವಿಷಯದಲ್ಲಿ ಉದಾರ ಮನಸ್ಸಿನಿಂದ ವರ್ತಿಸಿ ಉದಾರವಾಗಿ ಪರಿಹಾರವನ್ನು ಕೊಡಬೇಕೆಂದು ತಿಳಿಸಿ, ಸರ್ಕಾರವವರು ಇದನ್ನು ಗಣನೆಗೆ ತೆಗೆದುಕೊಳ್ಳುತ್ತಾರೆಂದು ನಂಬಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ಮಸೂದೆಗೆ ಐದು ಗಂಟೆಗಳ ಕಾಲಾವಕಾಶ ವನ್ನು ಹೆಚ್ಚಿಸಿದ್ದೀರಿ. ಇನ್ನು 19 ನಿಮಿಷ ಮಾತ್ರ ಉಳಿದಿದೆ. ಆದುದರಿಂದ ಇದರ ಚರ್ಚೆಗೆ ಕಾಲವನ್ನು ಹೆಚ್ಚು ಮಾಡಿದ್ದೀರಾ? ಈ ಬಗ್ಗೆ ಸೂಚನೆಯೇನಾದರೂ ಸಭೆಯ ಮುಂದೆ ಬಂದಿದ್ದು ಅದು ಅಂಗೀಕೃತವಾಗಿದೆಯೇ ಎಂದು ಕೇಳುತ್ತೇನೆ?

ಅಧ್ಯಕ್ಷರು.—ನಾನು ಒಂದು ಮಾತನ್ನು ಹೇಳುತ್ತೇನೆ. ನಾನು ಲೆಕ್ಕದಲ್ಲಿ ತುಂಬ weak ಆದರೆ ಅವರು ತಿಳಿದುಕೊಂಡಿರುವಷ್ಟು weak ಅಲ್ಲ. 12 ಗಂಟೆಗೆ ಸರಿಯಾಗಿ 3 ಗಂಟೆ 40 ನಿಮಿಷವಾಗಿದೆ. ಹನ್ನೆರಡೂವರೆ ಗಂಟೆಯವರೆಗೂ ಲೆಕ್ಕ ಹಾಕಿದರೆ ನಾಳು ಗಂಟೆ ಹತ್ತು ನಿಮಿಷವಾಗುತ್ತದೆ. ಅದ್ದರಿಂದ ನಾಳೆಗೆ ಇನ್ನೂ 50 ನಿಮಿಷ ಉಳಿಯುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿನ್ನೆಯ ದಿನ ಒಂದು ಗಂಟೆ ಚರ್ಚೆಯಾಗಿರುವುದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಅದನ್ನು ಸೇರಿಸಿ ಲೆಕ್ಕ ಹಾಕಿದ್ದೇನೆ.

ಶ್ರೀ ಜೆ. ವೆಂಕಟಪ್ಪ.—ಸೆಲೆಕ್ಟ್ ಕಮಿಟಿಯ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶ ವಿದೆಯೇ?

ಅಧ್ಯಕ್ಷರು.—ನೋಡೋಣ.

†ಶ್ರೀ ಪಿ. ಡಿ. ಸಿಂಪ್ಸಾಂತೆ (ಮುದ್ದೆಬಿಹಾಳ).—ಗ್ರಾಮಾಧಿಕಾರಿಗಳ ಹುದ್ದೆಗಳನ್ನು ರದ್ದು ಮಾಡುವುದರಿಂದ ಎಲ್ಲರಿಗೂ ಗಾಬರಿಯಿದೆ, ನಮ್ಮ ಸಭೆಯ ಮತ್ತು ಸರ್ಕಾರದವರ ಅಭಿಪ್ರಾಯವೂ ಹಾಗೆಯೇ ಇದೆ. ಅದರಂತೆಯೇ ಈಗ ಸುಪ್ರೀಂ ಕೋರ್ಟ್ ರೂಲಿಂಗ್ ಸಹ ಬಂದಿದೆ. ಈ ಹುದ್ದೆಗಳಿಗೆ ಸಂಭಾವನೆ ಏನಿರಬೇಕು, ಏನಿದೆ ಎನ್ನುವುದನ್ನು ಸಂಬಂಧ ವಿಚಾರಮಾಡಬೇಕಾಗಿದೆ. ಇವರಿಗೆ ಸಂಭಾವನೆ ಇರುವುದು ಜಮೀನು ಎಂದು ಸರ್ಕಾರದವರು ತಿಳಿದುಕೊಂಡಿದ್ದಾರೆ ಇದು ತಪ್ಪು ಎಂದು ನನ್ನ ಅಭಿಪ್ರಾಯ. ಸಂಭಾವನೆಗಾಗಿ ಕೊಡುವುದು ಜಮೀನಲ್ಲ. ಜಮೀನಿನ ಮಾಲೀಕರು ಪಟೇಲರುಗಳಾಗಿದ್ದಾರೆ. ಆ ಹುದ್ದೆಯನ್ನು ಸಲುವಾಗಿ ಜಮೀನನ್ನು ಕೊಟ್ಟಿರಲ್ಲ. ಪಟೇಲರಿಗೆ ನೌಕರಿ ಮಾಡುತ್ತಾರೆಂದು ತಿಳಿದುಕೊಂಡು ಆ ಹುದ್ದೆಯ ಸಲುವಾಗಿ ಜಮೀನು ಕೊಟ್ಟಿದ್ದಲ್ಲ. ಆದರೆ ಅವರು ಏನು ಕಂದಾಯವನ್ನು ಕೊಡುತ್ತಿದ್ದರೋ ಅದರಲ್ಲಿ ಕೆಲವು ಭಾಗ ಸೂಟಿ ಬಿಡುತ್ತಾರೆ. ಈ ರೀತಿ ಏನು ಸೂಟಿ ಬಿಡುತ್ತಾರೆಯೋ ಅದುಮಾತ್ರ ಸಂಭಾವನೆಯಾಗುತ್ತದೆಯೇ ಹೊರತು, ಮತ್ತೊಂದೇನೂ ಅಲ್ಲ. ಇದು ನನ್ನ ಸ್ವಂತ ಮಾತಲ್ಲ ಮುಂಬೈ ಕಾಯಿದೆಯಲ್ಲಿ, Bombay 8 R. D. 1287 of 1807 ಪ್ರಕಾರ the land is not assigned property ಎಂದು ಮಾಡಿದ್ದಾರೆ. ಯಾವುದು assigned ಎಂದರೆ, ನಷ್ಟ ಎಂದು ಕೊಡುತ್ತಾರೆ. ಕಂದಾಯ ಕೊಟ್ಟು ಏನು ಉಳಿಯುತ್ತದೆಯೋ ಅದು ಮಾತ್ರ assigned property ಆಗುತ್ತದೆ. The land is not an assigned property ಅವರು ಏನು ಸೇವೆ ಮಾಡುತ್ತಾರೆಯೋ ಅದಕ್ಕೆ, ಹುದ್ದೆಗೆ ಸಂಭಾವನೆ ಮಾತ್ರ. ಸಂಭಾವನೆ ರದ್ದು ಮಾಡುವುದರಿಂದ, ಎಲ್ಲವನ್ನು ತೆಗೆದುಕೊಳ್ಳಿ, ಐದುಪಟ್ಟು ತೆಗೆದುಕೊಳ್ಳಿ. ಆ ಪ್ರಶ್ನೆಬೇರೆ ಆಗುತ್ತದೆ. ಆದರೆ ಆ ಜಮೀನನ್ನು ಮಾರುತ್ತಾನೆಂದರೆ ಆಗ ಕಂದಾಯದ 20 ಪಟ್ಟು ಕೊಡಬೇಕೆಂದು ಹೇಳುತ್ತಾರೆ. ಪಟೇಲರಿಗೆ. ತಮ್ಮ ತಮ್ಮೊಳಗೆ ಆ ಜಮೀನನ್ನು ಏರ್ಪಾಡು ಮಾಡಿಕೊಳ್ಳಲಿಕ್ಕೆ, ಮಾರಾಟಮಾಡಲಿಕ್ಕೆ ಸಂಪೂರ್ಣ ಅಧಿಕಾರವಿದೆ. ಆ ಅಧಿಕಾರವನ್ನು ಕೊಡಕುಮಾಡಿ 20 ಪಟ್ಟು ಕಂದಾಯವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ. ಇದು ಅರ್ಥವಾಗುವುದಿಲ್ಲ. ನಮ್ಮಕಡೆ ಒಕ್ಕಲಿಕಾರರಲ್ಲಿ ಎಂದು ಭೇದವಿದೆ. ಇದರ ಸಂಬಂಧದಲ್ಲಿ ಸ್ವಲ್ಪ ವಿಚಾರ ಮಾಡಬೇಕಾಗಿದೆ. ಈ ಒಕ್ಕಲಿಕಾರರಲ್ಲಿ ಕೆಲವರನ್ನು ಈಗಾಗಲೇ ತೆಗೆದು ಹಾಕಿದ್ದಾರೆ. ಈಗ ಇರುವ ಇನ್ನು ಕೆಲವರಿಗೆ ಜಮೀನುಗಳಿದ್ದು, ಅವರೇ ಅದರ ಮಾಲೀಕರಾಗಿದ್ದಾರೆ. ಇದನ್ನು ನಾನು ಹೇಳುತ್ತೇನೆಂದಲ್ಲ ಈ ಬಗ್ಗೆ ಹೈಕೋರ್ಟ್ ತೀರ್ಪು ಕೂಡ ಇದೆ. ಈ ವಿಚಾರವನ್ನು ನಿನ್ನೆಯ ದಿನ ಮಾನ್ಯ ಸದಸ್ಯರಾದ ಕಾಜಗಾರಿಯವರೂ ತಿಳಿಸಿದ್ದಾರೆ ಇವರೇ ಜಮೀನು ಮಾಲೀಕರಾಗಿದ್ದಾರೆ ಆದರೆ ಅದಕ್ಕೆ ಕಂದಾಯವನ್ನು ಮಾತ್ರ ಕೊಡುವುದಿಲ್ಲ. ಅವರು ಕೆಲಸ ಮಾಡುವುದಕ್ಕೆ ಇಷ್ಟೇ ಸಂಭಾವನೆ. ಈಗ ಇರುವವರಿಗೆ ಪಗಾರ ಕೊಡುತ್ತಾರೆ ಅವರು ಕೆಲಸ ಮಾಡುತ್ತಾರೆ. ಹೀಗಿರುವುದರಿಂದ ಈ ಗ್ರಾಮಾಧಿಕಾರಿಗಳಿಗೆ ಮತ್ತು ಗ್ರಾಮ ಸಹಾಯರಿಗೆ ಜಮೀನಿನ ಮೇರೆ ಇರುವ ಹಕ್ಕನ್ನು ಕಸಿದು ಕೊಂಡು, ಜಮೀನನ್ನು ಮಾರಾಟ ಮಾಡಿದರೆ ಅಥವಾ ಅವರವರಲ್ಲಿ ಹಂಚಿಕೊಂಡರೆ 20 ಪಟ್ಟು ಕಂದಾಯ ಕೊಡಬೇಕು ಎಂದು ಸೂಚಿಸಿರುವುದು ನ್ಯಾಯವಲ್ಲವೆಂದು ಹೇಳುತ್ತೇನೆ.

ಸೇತ್ ಶೇಂದಿ ಸಂಬಂಧವಾಗಿ ಹೇಳುವಾಗ ಕುಲಕರ್ಣಿ ಪರಗಣದ ಅಕ್ಕಿಸಲ್ಲಿ 200-300 ವರ್ಷಕಿಂತ ಮೊದಲು ಒಂದು ಸೆಕ್ಟೆ ಇತ್ತು. ಒಮ್ಮೆ ಹೈಕೋರ್ಟಿಗೂ ಹೋಯಿತು. ಬೊಂಬಾಯಿ ಹೈಕೋರ್ಟಿನಲ್ಲಿಯೂ ಕೂಡ ಶೇತ್ ಶೇಂದಿ, ಜಾತಕ್ಕೆ ಕೊಡಬೇಕೆಂದು ಮೊದಲಿಗಿದ್ದ ಸರಕಾರದವರು ಅಂದರು. 1927ರಿಂದ ಎಷ್ಟೋ ಸಾರಿಯಾ ಕೇಸುಗಳಾದವು. ಸೇತ್ ಶೇಂದಿ ಎಗ್ಗೆ ಹೇಳುವಾಗ they were having the Kader Inams. 361 ನೇ ಕೇಸಿನಲ್ಲಿ ಒಂದು ಕಾಯಿದೆ ಇತ್ತು. ಮತ್ತೆ 1827ರಲ್ಲಿ ಒಂದು ಕಾಯಿದೆ ಬಂತು. 185 ರಲ್ಲಿ ಕಾಯಿದೆ ಬಂದಿತು. 1874ರಲ್ಲಿ ಒಂದು ಕಾಯಿದೆ ಬಂತು. ಹೀಗೆ ಈ ಎಲ್ಲಾ ಕಾಯಿದೆಗಳು ಬಂದರೂ ಶೇತ್ ಸೇಂದಿಯವರ ಸಲುವಾಗಿ ರದ್ದು ಮಾಡಿದೆ ಎಂದು ಅವರು ಮಾಡಲಲ್ಲ. ಅವರ ಭೂಮಿ

ಏನಿತ್ತೋ ಅದರ ಮೇಲೆ ಇಷ್ಟು ಕಂದಾಯ ಎಂದು ಹಾಕಿ ತೆಗೆದುಕೊಳ್ಳುತ್ತಿದ್ದರು ಪತನು ಪ್ರಶ್ನೆ ಬರುತ್ತದೋ ಇಲ್ಲವೋ ಎಂದು ಒಂದು ಸಲ ಪ್ರಶ್ನೆ ಅಲ್ಲಿ ಬಂದಿತ್ತು. ಈ ಪ್ರಸಂಗ ಬಂದಾಗ ಬಾಂಬೆ ಹೈಕೋರ್ಟಿನಲ್ಲಿ ಆದ ಕೇಸಿನ ವಿಚಾರ ಹೇಳಿದೆ. 1919 ರ ಹೈಕೋರ್ಟಿನ Law Report C.L. 12 Bombay ನಲ್ಲಿ Page 5 "5. Yellappa *vs.* Marilingappa" 577. ಇದರೊಳಗೆ ಏನು ಬಂತು ಎಂದರೆ ಓಲೆಕಾರರರಿಗೆ ಜಮೀನು ಕೊಟ್ಟು ಕಂದಾಯ ಹಾಕಿ ಎಂದರು. ನಮ್ಮ ಕಡೆಗೆ ಅಪೀಲು ಆದಾಗ ಸರಕಾರದವರು ಕೆಲವರಿಗೆ ರದ್ದುಮಾಡಿ, ಮತ್ತೊಬ್ಬರಿಗೆ ರದ್ದು ಮಾಡದೇ ಇರುವುದು ಎಂದರೆ ಇದು illegal ಅದೇ ಇದನ್ನು ರಿಸೂಯ್ಂ ಮಾಡಲಕ್ಕೆ ಕಾನೂನಿಲ್ಲ ಎಂದು ಹೈಕೋರ್ಟಿನ ಡಿಸಿಷನ್ನು ಇದೆ. ಆ ಜಡ್ಜ್‌ಮೆಂಟನ್ನು ತಾವೂ ನೋಡಬಹುದು. ಇದರಂತೆ ಕಂದಾಯ ಹಾಕಿದ್ದರ ಮೇಲೆ ಶೇತ್ ಶೇಂದಿಗಳ ವಿಚಾರದಲ್ಲಿ ಜಮೀನನ್ನು ಕೊಡಬೇಕೇ ಬೇಡವೇ ಎನ್ನುವ ವಿಚಾರ ಬಂದಿತು.

ನಾನು ನನ್ನ ಮತದಾರ ಕ್ಷೇತ್ರದ ದೃಷ್ಟಿಯಿಂದ ಹೇಳುತ್ತಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ನಮ್ಮ ಮಾನ್ಯ ಅಧ್ಯಕ್ಷರ ಕ್ಷೇತ್ರವಾದ ಹುನಗುಂದದಲ್ಲಿ ಇಂತಹ ತೊಂದರೆಗಳು ಬಹಳ ಇವೆ.

ಅಧ್ಯಕ್ಷರು.—ನಮ್ಮ ಹುನುಗುಂದ ತಾಲ್ಲೂಕಿನಲ್ಲಿ ಬಹಳ ಇವೆ. ನಾನು ಮಾತನಾಡಲಿಕ್ಕೆ ಆಗುವುದಿಲ್ಲವಲ್ಲ. (ನಗು).

ಶ್ರೀ ಪಿ. ಜಿ. ಸಿದ್ಧಾಂತಿ.—ತಮ್ಮ ಪರವಾಗಿ ನಾನೇ ಇಲ್ಲಿ ಈ ಮಾತನ್ನು ಆಡುತ್ತಿದ್ದೇನೆ. ಯಾರಿಗೆ ಅಧಿಕಾರವಿದೆ ಅವರಿಗೆ ಮಾರಾಟ ಮಾಡುವ ಅಧಿಕಾರವಿದೆಯೇ, ಪತನ್ ಆಕ್ಟಿನ ಪ್ರಕಾರ one tender ತರಾಚಿಗೆ ಎಂದು ಮಾಡಿಕೊಟ್ಟು, ಮತ್ತು ಅವನಿಂದ ಒಂದು ಪಟ್ಟು ತೆಗೆದುಕೊಳ್ಳಬೇಕು. ಇರ್ಲಾ ಇಪ್ಪತ್ತು ಪಟ್ಟು ತೆಗೆದುಕೊಳ್ಳಬೇಕೆಂದಿದೆ. ಇದು ಎಲ್ಲಿಯ ನ್ಯಾಯ ? ಏಕೆ ಕೇಳುತ್ತೀರಿ ? ಪಕೀಲರಿಗೆ ರೊಕ್ಕ ಎಂದರೆ ಹಣವನ್ನು ತರುವುದು ಇಂತಹ ಪತನ್ ಕಾಯಿದೆಯನ್ನು ರದ್ದು ಮಾಡುವಂತಹ ಕಾಯಿದೆ ಮಾಡಿಬಿಟ್ಟರೆ ಯಾರೂ ಮೊಕದ್ದಮೆಗೆ ಕೈ ಹಾಕುವುದಿಲ್ಲ. ಮತ್ತೊಂದು ಏನಿದೆ ಎಂದರೆ, ಇದರಲ್ಲಿ ಉದ್ಯೋಗವಿಲ್ಲದಂತೆ ಬಡಬಗ್ಗರಾದ ಓಲೆಕಾರರು ಲಕ್ಷಗಟ್ಟಲೆ ಹೋಗುತ್ತಾರೆ. ಮಾನ್ಯ ಕಂದಾಯ ಮಂತ್ರಿಗಳು ಸಾಗುವಳಿ ಸ್ವತಃ ಮಾಡುವವರು ಇದ್ದಾರೆ. ಅಂತಹವರಿಗೆ ಸಾಗುವಳಿ ಮಾಡಲು ಜಮೀನು ಅವರಿಗೇ ಬರುತ್ತದೆ ಎಂದು ಹೇಳುತ್ತಾರೆ. ಸ್ವಂತವಾಗಿ ಸಾಗುವಳಿ ಮಾಡುವವರು ಬಡವರಾಗಿದ್ದರೆ, ಅವರು ಮಾಲೀಕರಾಗಿರುವಂತೆ ಮಾಡಬೇಕಾದರೆ ಒಂದು ಪಟ್ಟು ಮಾರಾಟಕ್ಕೆ ಮೊದಲು, ಅನಂತರ ಇಪ್ಪತ್ತು ಪಟ್ಟು ಎಂದು ಇಲ್ಲಿರುವುದು ಎಷ್ಟು ನ್ಯಾಯವಾಗಿದೆ ಎನ್ನುವುದನ್ನು ನೀವೇ ನೋಡಿ. ಏನೋ ನಮ್ಮ ದುರ್ದೈವವೋ ಎನ್ನುವಂತೆ ಪತನ್ ಆಕ್ಟು ನಮ್ಮ ಕಡೆ ಇರುವಂತಹುದನ್ನು ಬಲ್ಲವರು ನಮ್ಮ ಸರಕಾರದೊಳಗೆ ಕಾಣಿಸಲಿಲ್ಲ. ಮಾನ್ಯ ಮಂತ್ರಿಗಳು ಹಳೆಯ ಮೈಸೂರಿನವರಾಗಿರತಕ್ಕವರು, ಈ ಎರ್ಲಾ ಕಾಯಿದೆಗಳನ್ನು ತೆಗೆದುಕೊಂಡು ನೋಡಿದ್ದರೆ ಈ ರೀತಿ ಮಾತಾಡುತ್ತಿದ್ದರೆ ?

Sri KADIDAL MANJAPPA.—The Speaker of the House is from Bijapur District. The Chief Minister is also from Bijapur District.

ಶ್ರೀ ಪಿ. ಜಿ. ಸಿದ್ಧಾಂತಿ.—ತಾವು ಇನ್ನೊಂದು ಏನು ಹೇಳುತ್ತೀರಿ ಎಂದರೆ, ಇದರೊಳಗೆ ಒಂದು ಪಟ್ಟು ಕೊಡಬೇಕೆಂದಿದ್ದೀರಿ. ಅಣ್ಣ ತಮ್ಮಂದಿರು ಮಾರಾಟ ಮಾಡುವ ಹಕ್ಕಿದ್ದರೆ, ಅದನ್ನು ವಿಚಾರ ಮಾಡಿಕೊಂಡು, ಇದನ್ನು ಸರಿಯಾಗಿ ಮಾಡಿ ಎಂದು ಇಷ್ಟು ಹೇಳುತ್ತೇನೆ.

ಇನ್ನೊಂದು ವಿಷಯ ಇದೆ ಅದು ಪರಗಾನ ಕುಲಕರ್ಣಿಗಳ ಅಬಾಲಷನ್ ಆಕ್ಟು ಇದರಲ್ಲಿಲ್ಲ. ಇಷ್ಟು ದಿವಸ ಏನು ಇದ್ದರು, ತೋಟಿ ತಳವಾರರು, ಓಲೆಕಾರರು ಮತ್ತು ಇನ್ನಿತರರು, ರಿಸ್ಯೂಂ ಮಾಡಲು ಬಂದಾಗ ಯಾವ ರೀತಿ ಕಾಯಿದೆಯಿಂದ ಬರಬೇಕು ಎನ್ನುವುದು ಗೊತ್ತಾಗಲಿಲ್ಲ. ಈ ತೋಟಿ, ತಳವಾರರು, ಓಲೆಕಾರರು, ಹರಿಜನರು ಇಂತಹವರುಗಳಿಗೆ ಪತನ್

(ಶ್ರೀ ಪಿ. ಟಿ. ಸಿದ್ಧಾಂತಿ)

ಆತನ ಹಾಗೆ ಮೂರು ಪಟ್ಟು, ಆರು ಪಟ್ಟು ಎಂದು ಕೊಡುವುದಕ್ಕೆ ಆಗುವದಿಲ್ಲ. ಅವರಿಗೆ ನೋಟೀಸನ್ನು ಕೊಡಿ. ನೋಟೀಸನ್ನು ಕೊಟ್ಟು ಇಂತಹ ಕಾಯಿದೆ ಮಾಡಿದೆ, ಇಲ್ಲ ಎನ್ನುವುದನ್ನು ತಿಳಿಸದೇ ಹೋದರೆ ಅವರಿಗೆ ಕಡೆಯತನಕ ಗೊತ್ತಾಗುವುದೇ ಇಲ್ಲ. ನೋಟೀಸನ್ನು ಕೊಡವೇ ಮಾಡಬಾರದು ಅಷ್ಟು ಮೂರ್ಖತನ ಅನ್ನೋಣ ಎಂದರೆ ತಪ್ಪಾಗುತ್ತದೆ. ಅದನ್ನು ಹೇಳಲಕ್ಕೆ ಹೋಗುವುದಿಲ್ಲ. ಸರಕಾರದವರು ಹೀಗೆ ಮಾಡುವುದು ತಪ್ಪು.

ಇನ್ನೊಂದು ವಿಷಯ ತಮ್ಮ ಮುಂದೆ ಹೇಳಬೇಕಾಗಿದೆ. 1950ನೇ ಇಸವಿಯಿಂದಲೂ ಕಾಯಿದೆಯಾಗುತ್ತಿದೆ. 1961ನೇ ಇಸವಿಯವರೆಗೂ ಕಾಯಿದೆಗಳಾಗಿವೆ. ಈ ಕಾಯಿದೆಯಲ್ಲಿ ಒಂದು ನೂರು ರೂಪಾಯಿಗಳಷ್ಟು ಕೊಡಬೇಕೆಂದು ಇದೆ. ಏನೋ ಕೊಡುವುದನ್ನು ಅಷ್ಟೋ ಇಷ್ಟೋ ತೀರ್ವವಾಗಿ ಕೊಡುವುದಿಲ್ಲ. ನಮಗೆ ಮಾತ್ರ ಏನು ಕೊಡಬೇಕೋ ಅದನ್ನು ಕೊಡುವುದಿಲ್ಲ. ನಿಮ್ಮಿಂದ ಬರುವ ಹಣ ಬರಬೇಕಾದರೆ ಅದನ್ನೂ ಶೀಘ್ರವಾಗಿ ಕೊಡುವುದಿಲ್ಲ. ಸರಕಾರದವರೇ ಕೊಡುವ ಹಣವಲ್ಲಿ ಮುರುಕೊಂಡು ಏಕೆ ಕೊಡಬಾರದು ? ಆ ರೀತಿ ಹುಕುಂ ಮಾಡಿ. ಈ ತರಾಚೆ ಇನ್ನಿತರ ಜನಕ್ಕೆ ಸರಕಾರದಿಂದ ಒಂದು ಸಾವಿರ ರೂಪಾಯಿಗಳು ಬರಬೇಕಾಗಿದ್ದರೆ ಅದನ್ನು ಕೊಡುವುದಿಲ್ಲ. ಮೊದಲು ಈ ದಿನದಿಂದ ಇನ್ನೂರು ರೂಪಾಯಿಗಳಷ್ಟು ಕೊಡಬೇಕಾಗಿದ್ದರೆ ಮೊದಲಿಗೆ ಇದನ್ನು ಕೊಡಬೇಕೆಂದು ಸರಕಾರ ಹೇಳಿದರೆ ಹೇಗೆ ? ಸರಕಾರದ ಕಡೆಯಿಂದ ಈ ಜನಕ್ಕೆ ಏನು ಕೊಡಬೇಕೋ ಅದರಲ್ಲಿ ಇವರಿಂದ ಬರಬೇಕಾದುದನ್ನು ತೆಗೆದುಕೊಂಡು ಏಕೆ ಕೊಡಬಾರದು ? ಮೊದಲಿಗೆ ಅವರಿಗೆ ಇಷ್ಟೇ ಕೊಡುವುದು ಎನ್ನುವುದರ ಬಗ್ಗೆ ನೋಟೀಸ್ ಕೊಡಿ. ನೋಟೀಸನ್ನು ಕೊಡದೇ ತಮಗೆ ಕೊಡಬೇಕಾದ ರೂಪಾಯಿಗಳನ್ನು ಕೊಡುವುದಿಲ್ಲ ಎಂದು ಪ್ರತಿಯೊಬ್ಬರು ಗುಮಾಸ್ತರು ಅಥವಾ ಕಾರಕೂನರ ಬಳಿಗೆ ಬಂದು ಲಂಚ ಕೊಟ್ಟು ಏನೂ ಬರಲ್ಲಿಲ್ಲ ಎಂದು ಪುನಃ ಬನ್ನನ್ನು ಹತ್ತಿ ಹೋಗಲು ಆಗುವುದಿಲ್ಲ. ಪ್ರತಿಯೊಬ್ಬರೂ ತಮಗೆ ಬರಬೇಕಾದ ಹಣ ಗುಮಾಸ್ತರಲ್ಲಿ ಹೋಗಿ ಅರ್ಜಿ ಕೊಡಬೇಕು. ಅನಂತರ ಅದು ಅಸಿಸ್ಟೆಂಟ್ ಕಮೀಷನರ ಗಮನಕ್ಕೆ ಹೋಗಬೇಕು. ಹೀಗೆ ಹೋಗಲು ಇಡೀ ವರ್ಷಗಟ್ಟಲೆ ಹಣ ಹೋಗುತ್ತದೆ. ಅವನಿಗೆ ಏನು ಕೊಡುತ್ತಿರೋ ಅದನ್ನು ನೋಟೀಸಿನ ಮೂಲಕ ಇಷ್ಟೇ ಕೊಡುವುದು ಎಂದೇಕೆ ಹೇಳಬಾರದು? ನಮ್ಮ ಕಡೆಯಿಂದ ಬರತಕ್ಕದ್ದು ಇಷ್ಟೇ ಎಂದು ತಿಳಿಸಬೇಕು.

12-30 P. M.

ನೀವು ಕೊಡುತ್ತಿರೋ ಕೊಡುವುದಿಲ್ಲವೋ ನನಗೆ ಅರ್ಥವಾಗುವುದಿಲ್ಲ. ಊರಿನೊಳಗೆಲ್ಲ ಅವರು ಕಛೇರಿಯಿಂದ ಕಛೇರಿಗೆ ಅಡ್ಡಾಡಿಕೊಂಡು ಜಮೀನು ಕೇಳುವ ವಿಚಾರ ಮಾಡಿದ್ದಾರೆ. ಒಂದು ವರ್ಷದೊಳಗೆ ಅವರು ಅರ್ಜಿ ಕೊಟ್ಟರೆ ರೊಕ್ಕ ಕೊಡುತ್ತೇವೆ. ಹಣ ತೆಗೆದುಕೊಳ್ಳಿ ಎಂದು ಹೇಳುತ್ತೀರಿ. ನಿಮ್ಮ ಮನಸ್ಸಿಗೆ ಬಂದರೆ ಮಾತ್ರ ಅವರ ಕಷ್ಟವೆಲ್ಲವನ್ನು ಛಿದ್ರ ಮಾಡುತ್ತೇವೆ. ಅಂದರೆ ಪರಿಹಾರ ಮಾಡುತ್ತೇವೆ ಎಂಬುದಾಗಿ ಹೇಳುತ್ತೀರಿ. ನಾಲ್ಕು ತಿಂಗಳಲ್ಲಿ ಅದನ್ನು ಕೊಡಬೇಕೆಂದು ಇದರಲ್ಲಿ ಬರೆದಿದ್ದೀರಿ. ಜಾಯಿಂಟ್ ಸೆಲೆಕ್ಟ್ ಕಮಿಟಿಯ ವರದಿ ಪ್ರಕಾರ ಹಣ ಕೊಡತಕ್ಕದ್ದನ್ನು ಸರ್ಕಾರ 6 ತಿಂಗಳೊಳಗಾಗಿ ಕೊಡಬೇಕು. ಮೊದಲು ಅವನಿಗೆ ಒಂದು ನೋಟೀಸ್ ಕೊಡಬೇಕು. ಆ ರೀತಿ ಕೊಡಬೇಕೆಂದರೂ ಒಂದು ವರ್ಷದೊಳಗೆ ಕೊಡಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ ಇದರಲ್ಲಿ ಬಡಬಗ್ಗರೂ ಸಹಾ ಇರುತ್ತಾರೆ. ಯಾರಾದರೂ ವರ್ತಕದಾರ ಶ್ರೀಮಂತರಿದ್ದರೂ ಅಂತಹವರ ಸ್ಥಿತಿಯೂ ಸಹ ಒಂದೇ. ಆಗ ನೂರು ರೂಪಾಯಿಗಳನ್ನು ತೆಗೆದುಕೊಂಡು ಜಮೀನನ್ನು ಬಿಡಿ ಎಂಬ ಪ್ರಶ್ನೆ ಬರುತ್ತದೆ. ಈ ಸ್ಥಿತಿ ನಮ್ಮ

ಒತ್ತಕಾರರಿಗೂ ಬರುತ್ತದೆ. ಈ ಸ್ಥಿತಿ ನಮ್ಮ ಅಧಿಕಾರಿಗಳಿಗೂ ಬಂದರೆ ಅವರ ಜಮೀನನ್ನು ಸರ್ಕಾರಕ್ಕೆ ಸಮರ್ಪಣೆ ಮಾಡಿ ಮುಂದೆ ಎಲ್ಲ ವಿಚಾರವನ್ನು ಮಾಡಬೇಕು ಎಂದು ಇವರಿಗೆ ಅಕ್ಯುಮುಲೇಟರ್ ನೋಟೀಸ್ ಕೊಡಿ. ಆಮೇಲೆ ರೆಕ್ಕೆ ಫಾಕ್ ಕಂಪನ್‌ಸೇಷನ್ ಕೊಡಿ ಬರಾಬರಿ ಯಾಗುತ್ತದೆ. ಇನ್ನು ನಾನು ಹೇಳುವುದು ಹೆಚ್ಚಿನದು ಏನೂ ಇಲ್ಲ. ಈ ವಿಷಯದಲ್ಲಿ ಜಾಸ್ತಿ ಮಾತನಾಡುವುದಿಲ್ಲ. ಜಾಸ್ತಿಯಾಗಿ ಇವರಿಗೆ ಕಂಪೆನ್‌ಸೇಷನ್ ಕೊಟ್ಟರೆ ಬಹಳ ಒಳ್ಳೆಯದು ಕನಿಷ್ಟಪಕ್ಷ ಅವರಲ್ಲಿರತಕ್ಕ ಜಮೀನನ್ನು ಅವರಿಗೆ ಬಿಟ್ಟುಬಿಡಿ. ಅದನ್ನು ಸರ್ಕಾರದವರು ತೆಗೆದುಕೊಳ್ಳಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House now raises and will meet to-morrow at 1 P.M.

The House adjourned at Thirty-five Minutes Past Twelve of the Clock to meet again at One of the Clock on Thursday, the 20th April 1961.